


ಅಪರಂಜಿ

ನಗೆಯ ಕಾರಂಜಿ

- ☐ ಆನಂದ್ ☐ ಲೀಲಾಮಿರ್ಲೆ ☐ ನಳಿನೀ ಪ್ರಿಯ
- ☐ ಅಶೋಕ್ ☐ ಸೂರಿ ☐ ವೇದರಸ
- ☐ ಲಿಂಕ್ಸ್ ☐ ಶೀನೂ ☐ ಗಣೇಶ್
- ☐ ರಾಮಣ್ಣ ನ್ಯಾಕ್ ಆಲೆಟ್ಟಿ ☐ ಜಿ. ಎನ್. ಜಿ. ☐ ಕೇಫ
- ☐ ವ್ಯಂಗ್ಯ ಚಿತ್ರಗಳು : ಚಂದ್ರು. ಅಶ್ವತ್

ಸಂಪುಟ-೩
ಸಂಚಿಕೆ-೧೧
ಆಗಸ್ಟ್-1986

ಬಿಡಿಪ್ರತಿ :
ಕೇವಲ ಒಂದೂವರೆ ರೂಪಾಯಿ



(ತಿಳಿನಗೆಯ ಕಾರಂಜಿ)

ಸಂಪುಟ ೩ ಸಂಚಿಕೆ ೧೧

ಆಗಸ್ಟ್ 1986

ಬಿಡಿ ಪ್ರತಿ :—ಕೇವಲ ಒಂದೂವರೆ ರೂಪಾಯಿ

ವಾರ್ಷಿಕ ಚಂದಾ : ರೂ. 15/-

ಆಜೀವ ಚಂದಾ : ರೂ. 150/-

ಗೌರವ ಸಲಹೆಗಾರರು :
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು–560 003

ಈ ಸಂಚಿಕೆಯಲ್ಲಿ................

ಲೇಖನ	ಲೇಖಕ/ಲೇಖಕಿ	ಪುಟ
ಅಪರಂಜಿ ಕಿಡಿ	ಆನಂದ್	4
ಏನನ್ಯಾಯ	ಲೀಲಾಮಿರ್ಲೆ	6
ಬೆಂಗಳೂರು ಇಂದು–೫	ನಳಿನೀ ಪ್ರಿಯ	8
ನವ್ಯ ಶಿಶುಗೀತೆಗಳು	ಅಶೋಕ್	11
ರಾಮೇಶ್ವರಕ್ಕೆ ಹೋದ್ರೂ...	ಸೂರಿ	12
ನಂ ಕ್ಲಬ್ಬಿನಲ್ಲಿ	ಆನಂದ್	16
ರಾಮರಾಜ್ಯದಲ್ಲಿ	ವೇದರಸ	16
ಕೃಷ್ಣ ಮತ್ತು ಹನುಮಂತ	ಗಣೇಶಯ್ಯ	17
"ಹೆಲ್ಮೆಟ್ ಭ್ರಮೆ"	ಲಿಂಕ್ಸ್	19
ಪ್ರಶ್ನೋತ್ತರ	ಲೀಲಾ ಮಿರ್ಲೆ	21
ಹ್ಯಾಲೀ ಗಾದೆಗಳು	ಆನಂದ್	22
ಇಂಗ್ಲಿಷಿಗೆ ಕುತ್ತು ಬಂದಿದೆಯೇ	ಗಣೇಶ್	23
ಅಪಾರ್ಥ ಕೋಶ	ಆನಂದ್	25
ಗೌರಿ-ಗಣೇಶ	ರಾಮಣ್ಣ ನ್ಯಾಕ್ ಆಲೆಟ್ಟಿ	26
ಪುಸ್ತಕ ವಿಮರ್ಶೆ	ಶೀನೂ	27
ಭಾವೈಕ್ಯತೆ	ಜಿ. ಎನ್. ಜಿ.	28
ಯೂತ್ರಿಕರ ಪತ್ರ	ಕೇಫ	33

ವ್ಯಂಗ್ಯ ಚಿತ್ರಗಳು : ಚಂದ್ರು, ಅಶ್ವತ್

ಮುದ್ರಣ : ಇಂಪ್ರೆಷನ್ಸ್, ಬೆಂಗಳೂರು-3. ದೂರವಾಣಿ : 363444 362989

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ-೩ ಆಗಸ್ಟ್-೮೬ ಸಂಚಿಕೆ-೧೧

ಉಪಾಸಕನು ಬ್ರಹ್ಮಲೋಕಕ್ಕೆ ಹೊರಡುವಾಗ ಪುಣ್ಯಪಾಪಗಳನ್ನು ಕೊಡವಿ ಕೊಳ್ಳುವನು. ಇಷ್ಟರಾದವರು ಪುಣ್ಯವನ್ನು ದ್ವೇಷಿಗಳು ಪಾಪವನ್ನು ಹೊಂದುವರು.

—(?) ಉಪನಿಶತ್

ಈ ಉಪನಿಷದ್ವಾಕ್ಯವು ಈ ಲೋಕದಲ್ಲೂ ಅನ್ವರ್ಥವಾಗಿದೆ. ಪ್ರಜೆಯು ಪರಲೋಕಕ್ಕೆ ಹೊರಡುವ ಮುನ್ನ ಅವನ ಶ್ರಮದ ಪುಣ್ಯವನ್ನು ರಾಷ್ಟ್ರವೂ, ಅವನ ತಲೆಯ ಮೇಲಿದ್ದ ರಾಷ್ಟ್ರದ ಸಾಲವನ್ನು ಅದೇ ರಾಷ್ಟ್ರವೂ ಹಿಂದಕ್ಕೆ ಪಡೆಯುತ್ತದೆ.

ಅಧಿಕಾರದಲ್ಲಿದ್ದು ಆಳುವವನು ಮಾಡಿಕೊಂಡ ಆಸ್ತಿಯನ್ನು ಅವನ ವಂಶ ದವರೂ, ಅವನು ಕೊಡುವ ಪರ್ಮಿಟ್, ಲೈಸೆನ್ಸ್, ಕಂಟ್ರಾಕ್ಟ್‌ಗಳನ್ನು ಮಿತ್ರರೂ, ಅದರಿಂದಾಗುವ ನಷ್ಟವನ್ನು ಇತರರೂ ಪಡೆಯುವರು.

ರಾಜಕಾರಣಿಯು (ಅಪರೂಪಕ್ಕೆ) ಮಾಡಿದ ಪುಣ್ಯವನ್ನು ಅವನ ಪಕ್ಷ ಪಡೆಯುತ್ತದೆ. ಅವನ ಪಾಪಗಳನ್ನು (ಅಪ್ರಿಯರಾದ ?) ಮತದಾರರು ಪಡೆಯುತ್ತಾರೆ.

ಅಥವಾ ಅವನು ಮಾಡಿದ ಸಮಸ್ತ ಪಾಪಗಳನ್ನು, ಚುನಾವಣೆಯಲ್ಲಿ ಆರಿಸಿ ಬಂದೊಡನೆ ಕೊಡವಿಕೊಳ್ಳುತ್ತಾನೆ.

ಆಡಳಿತಪಕ್ಷದವರು ಎತ್ತಿದ ಸಾಲಗಳೆಲ್ಲದರ ಹೊರೆಯನ್ನೂ, ಜನತೆ ಹೊರ ಬೇಕಾಗುವುದು ಅನಿವಾರ್ಯ.

ಅಪರಂಜಿ ಕಿಡಿ

— ಆನಂದ್

ದಂತ ಗೋಪುರದಲ್ಲಿರುವ ಪ್ರಧಾನಿ ; ಅಡ್ವಾನಿ ಟೀಕೆ

— ಪತ್ರಿಕೆ

ದೆಹಲಿಯನ್ನು ಅವರು ಹೀಗೆ ವರ್ಣಿಸಬಾರದು !

* * * * *

ವಿಶ್ವ ಶಾಂತಿಗಾಗಿ 108 ಆನೆ ಪೂಜೆ

— ಸುದ್ದಿ

ವಿಷಯ ದಂತ ಕಥೆಯಂತಿದೆ !

* * * *

ಕಾವೇರಿ ಚರ್ಚೆಗಾಗಿ ಮದರಾಸಿನಿಂದ ಬಂದ ಗಣ್ಯರು ಅಲ್ಲಿಂದಲೇ ಕುಡಿಯುವ ನೀರನ್ನು ತಂದಿದ್ದರು ಎಂಬುದು ಖಚಿತವಲ್ಲವಂತೆ !

* * * * *

ಆಳಸಮುದ್ರದ ಮೀನುಗಾರಿಕೆ ಬಂದರಾಗಿ ಮಲ್ಪೆ

— ಪತ್ರಿಕೆ

ಈ ಕೈಗಾರಿಕೆ ವಿಧಾನಸೌಧದಲ್ಲೂ ಪ್ರತಿನಿಧಿಸಲ್ಪಟ್ಟಿದೆ ಅನ್ನುವುದು ಶುದ್ಧ ಕುಹಕ !

* * * * *

‘ವಿದ್ಯಾರ್ಥಿಗಳೆಲ್ಲಾ ಒಂದಾಗಿ’

— ಗೋಡೆ ಬರಹ

ಈ ಗೋಡೆ ಬರಹಗಾರರ ತಿ. ಧಿ ಯಾವಾಗ ಆಗುತ್ತೋ?

* * * * *

5

ಚುನಾವಣೆಯಲ್ಲಿ ಮತಗಳನ್ನು ಕುಲಗೆಡಿಸುವುದರಲ್ಲಿ ಅನಕ್ಷರಸ್ಥರಿಗಿಂತ ಪದವೀಧರರೇ ಮುಂದಿದ್ದಾರೆ

— ಸುದ್ದಿ

ಕುಲಗಟ್ಟ ವಿದ್ಯಾಭ್ಯಾಸದ ಫಲವೇನೋ ?

*   *   *   *   *

ಭಾರತೀಯ ಅಮೇರಿಕನ್ ಸುಂದರಿ ಆಯ್ಕೆ ; ಎರಡು ಗುಂಪುಗಳಲ್ಲಿ ವಿರಸ

— ಸುದ್ದಿ

ಅಲ್ಲೂ ನಮ್ಮ ರಾಜಕೀಯ ತಳಹದಿ ಭದ್ರವಾಗಿರುವಂತಿದೆ !

*   *   *   *   *

ಶಿಕ್ಷಣ ಇಲಾಖೆ ಹಳೆಯ ಲಾರಿ ನಡೆಸಿದಂತೆ ; ಸಮಸ್ಯೆಗಳು ಬಹಳ, ಪರಿಹಾರ ಕಡಿಮೆ

— ಮಾಜೀ ಸಚಿವ ರಘುಪತಿ

ಅದಕ್ಕೆ ಹೊಸಲಾರಿ ಡೆಲ್ಲಿಯಿಂದ ಕಳಿಸುತ್ತಾರಂತಲ್ಲ !

*   *   *   *   *

ಏನನ್ಯಾಯ

ಲೀಲಾ ಮಿರ್ಲೆ

ಮದುವೆಗೆ ಮುಂಚೆ

(ವಧುವಿನ ಪಕ್ಷದ ಕಾಮೆಂಟ್ಸು)

ಹುಡುಗ ತುಂಬಾ ಬುದ್ಧಿವಂತ·
ಒಳ್ಳೆ ಕೆಲಸದಲ್ಲಿದ್ದಾನೆ.
ಹುಡುಗ ತುಂಬ ಸೋಶಿಯಬಲ್ಲು.
ಎಲ್ಲಾ ಕಂಡೂ ಕೇಳಿದ ಜನ.
ಇಂಥಾ ಮನೆ ಸಿಗೋದು ತುಂಬಾ ಕಷ್ಟ.
ಅತ್ತೆನೂ ಸಾಧುವಾಗಿ ಕಾಣ್ತರೆ.
ಜಾತಕದಲ್ಲಿ 33 ಗುಣಗಳು ಬಂದಿವ. ಇನ್ನೇನು.
ಒಟ್ಟಿನಲ್ಲಿ ನಮ್ಮ ಹುಡುಗಿ ಪುಣ್ಯ ಮಾಡಿದ್ದಳು.

(ವರನ ಪಕ್ಷದವರ ಅನಿಸಿಕೆ)

ತುಂಬಾ ಒಳ್ಳೆಯ ಹುಡುಗಿ ಗಂಭೀರವಾಗಿದ್ದಾಳೆ.
ತೀರಾ ಮಾಡ್‌ರನ್ನು ಅಲ್ಲ, ಅತೀ ಹಳೇ ಕಾಲದ ಹಾಗೂ ಇಲ್ಲ.
ಒಂಥರ ಹೊಂದಿಕೊಂಡು ಹೋಗೋ ಸ್ವಭಾವದ ಹಾಗೆ ಕಾಣುತ್ತೆ.
ನಗನಗತಾ ಇರ್ತಾಳೆ - ಜನ ಬೇಕು ಸಧ್ಯ ಮೌನ ಗೌರಿಯಲ್ಲ.
ಪೋಸ್ಟ್ ಗ್ರಾಜುಯೇಟ್ ಅಷ್ಟೆ ಅಲ್ಲ, ಇಕೆಬಾನ, ರಶ್ಯನ್ನು, ಭರತನಾಟ್ಯ
ಎಲ್ಲಾ ಬರುತ್ತೆ.
ಏನೊ ಎಲ್ಲಾ ನಮ್ಮ ಹುಡುಗನ ಅದೃಷ್ಟ.

ಮದುವೆಯಾದ ಕೆಲವು ತಿಂಗಳ ನಂತರ

(ಹುಡುಗಿಯ ಕಡೆಯವರ ಟೀಕೆಗಳು)

ಏನಾದ್ರೂ ಅನ್ನಿ ಆವಳ ಗಂಡ ತುಂಬಾ ಸ್ಟ್ರಿಕ್ಟ್ಉ
ಈಗಿನ ಕಾಲದಲ್ಲಿ ಯಾರ್ ಹಾಗಿರ್ತಾರೆ. (?)

ಏನೊ ಒಂಥಾರಾ ಜನ.
ಸದಾ ಏನಾದ್ರು ತಪ್ಪು ಕಂಡು ಹಿಡಿತಾ ಇದ್ರೆ,
ನಂ ಹುಡುಗಿ ತಾನ ಸುಮ್ಮನಿರ್ತಾಳೆಯೇ.
ಏನೂ ಮದುವೆ, ಮದುವ ಅಂತ ಆತುರ ಮಾಡ್‌ಬಿಟ್ಟ.
ಒಟ್ಟಿನಲ್ಲಿ, ಅವಳ ಹಣೇ ಬರಹ !

ಹುಡುಗನ ಮನೆಯವರ ರಿಮಾರ್ಕುಗಳು

ಚೂರು ಹೊಂದಾವಣಿಕೆಯೇ ಇಲ್ಲ.
ಏನೊ ಒಂಥಾರಾ ಹುಡುಗಿ.
ಈಗಿನ ಕಾಲದ ಹುಡುಗಿಯರನ್ನು ಅರ್ಥ ಮಾಡ್‌ಕೊಳೋದೆ ಕಷ್ಟ.
ಕಾಲ ಕೆಟ್ಹೋಗಿದೆ.
ನಾಕ್ ಜನ ಇರೊ ಮನೇಲಿ, ತನಗ್ ಹ್ಯಾಗ್ ಬೇಕೊ ಹಾಗ್ ಇರ್ತೀನಿ
ಅಂದ್ರೆ ಹ್ಯಾಗಾಗುತ್ತೆ.
ಹಣೆಬರಹನ ತಪ್ಪಿಸೊರು ಯಾರು ?

ಇದೇನು, ಏಕ್‌ಹೀಗೆ, ತಪ್ಪುಯಾರದು ? ಯಾರದ್ದೂ ಅಲ್ಲ, ಬದಲಾಗುತ್ತಿರುವ ಕಾಲದ್ದು, ಅದನ್ನು ಅರ್ಥಮಾಡಿಕೊಳ್ಳದ ಜನದ್ದು, ಅಲ್ಲವೇ ?



ಸ್ವಲ್ಪ ಹಣಾ ಮಾತ್ರ ಕಳುವಾಯ್ತು ಅಂತೀರಲ್ಲ, ನೂರು ಚಿನ್ನದ ಬಿಸ್ಕಿಟ್ ಮೂರು ಲಕ್ಷ ಕರೆನ್ಸಿ ಬಗ್ಗೆ ಹೇಳ್ರೀ

8

ಬೆಂಗಳೂರು ಇಂದು—೫

—ನಳಿನೀಪ್ರಿಯ

ಪಾಪಣ್ಣನ ಶ್ರದ್ಧೆ

ಅಂಚೆ ಪೇದೆ ಪಾಪಣ್ಣ ತುಂಬಾ ಶ್ರದ್ಧಾವಂತ. ಮೊನ್ನೆ ರಾಜೀವ್ ಗಾಂಧಿ ಉದ್ಘಾಟಿಸಿದ ಭವ್ಯ ಕಛೇರೀಲಿ ಕೆಲಸ ಸಿಕ್ಕಿದ ಮೇಲಂತೂ, ಹೊಸಾ ಅಗಸನ ತರಹ ಎಲ್ಲಿಲ್ಲದ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾನೆ. ಅವನ ಕೆಲಸ ಸಾರ್ಟಿಂಗ್ ಆಫೀಸ್‌ನಲ್ಲಿ. ಸಾರ್ಟಾದ ಕಾಗದದ ಕಂತೆಗಳನ್ನ ಪಕ್ಕದ ಕಟ್ಟಡಕ್ಕೆ ರವಾನಿಸಿ, ಬೇರೆ ಬೇರೆ ಊರುಗಳ ಹೆಸರಿರುವ ತೊಟ್ಟಿಗಳಲ್ಲಿ ಹಾಕುವುದು. ಮೊನ್ನೆ ಅವನ ಸೂಪರ್‌ವೈಸರ್ "ಪಾಪಣ್ಣ, ಈ ಕಂತೇನ ದೊಡ್ಡಬಳ್ಳಾಪುರಕ್ಕೆ ಹಾಕಿ ಬಾ" ಅಂತ ನಯವಾಗಿಯೇ ಹೇಳಿದನಂತೆ. ಕಂತೇ ತೊಗೊಂಡು ಹೊರಟ ಪಾಪಣ್ಣ ಹಿಂದಕ್ಕೆ ಬರಲೇ ಇಲ್ಲವಂತೆ. ಅವತ್ತೆಲ್ಲಾ ಅವನ ಸುಳಿವಿಲ್ಲ. ಸಂಜೆ ಬಾಗಿಲು ಮುಚ್ಕೋವೇಳೆಗೆ ದೊಡ್ಡಬಳ್ಳಾಪುರದಿಂದ ಟ್ರಂಕ್ ಕಾಲ್. ಅಲ್ಲಿನ ಪೋಸ್ಟ್ ಮಾಸ್ಟರಿಂದ, "ನಿಮ್ಮ ಪಾಪಣ್ಣ ಬೆಂಗಳೂರಿನಿಂದ ನಡಕೊಂಡು ಬಂದು ಸುಸ್ತಾಗಿ ಕೂತಿದ್ದಾನೆ ಏನು ಸಮಾಚಾರ ?" ಅಂತ.

ಈಗ ಪಾಪಣ್ಣನ್ನ ವಿದೇಶ ಪತ್ರಗಳ ರವಾನೇ ಇಲಾಖೇಲಿ ಹಾಕಿದ್ದಾರೆ. ರಿಸ್ಕ್ ಯಾಕೆ ತೊಗೋಬೇಕು !

ಟ್ರಾಫಿಕ್ ಗಣತಿ

ಇತ್ತೀಚಿನ ಒಂದು ಟ್ರಾಫಿಕ್ ಗಣತಿಯ ಪ್ರಕಾರ, ಬೆಂಗಳೂರಿನಲ್ಲಿ ವಾಹನ ಸಂಚಾರ ಗಣನೀಯವಾಗಿ ಹೆಚ್ಚಾಗಿದ್ದು, 1985-86 ರಲ್ಲಿ ಎಲ್ಲಾ ವಾಹನಗಳೂ ಸೇರಿ ಒಟ್ಟು 1,54,00,000 ಕಿ.ಮೀ. ಸಂಚರಿಸಿದ್ದುವಂತೆ. ಈ ವರ್ಷ ಈ ಸಂಖ್ಯೆ ಸ್ವಲ್ಪ ಕಡಿಮೆಯಾಗುವ ಸಂಭವವಿದೆ. ಕಾರಣ, ಮಲ್ಲೇಶ್ವರದ ಮಲ್ಲಪ್ಪ ಗೌಡರು, ಬೇಕೆಂದರೂ ಡ್ರೈವ್ ಮಾಡುವ ಹಾಗಿಲ್ಲ. ವೈಯ್ಯಾಲೀಕಾವಲಿನ ಪದ್ಮಜ ರವರು ಕಾರ್ ಅಂದರೇ ಹೆದರುತ್ತಾರೆ.

ಹಲವು ವಾರಗಳ ಹಿಂದ ಮಲ್ಲಪ್ಪಗೌಡರು ತಮ್ಮ ಕಾರಿನಲ್ಲಿ. ಒಂದಾದ ಮೇಲೊಂದರಂತೆ ಐದು ಟ್ರಾಫಿಕ್ ಲೈಟ್‌ಗಳನ್ನು ಕೆಂಪು ದೀಪವಿದ್ದಾಗ್ಯೂ ಸಹ ಉಡಾಯಿಸಿಕೊಂಡು ಡ್ರೈವ್ ಮಾಡಿದಾಗ, ಪೋಲೀಸರು ಹಿಡಿದು ಕೋರ್ಟಿಗೆಳೆದ ರಂತೆ. ನ್ಯಾಯಾಧೀಶರು "ಇದೇನು ಮಲ್ಲಪ್ಪಗೌಡರೇ, ಇಷ್ಟು ವಿದ್ಯಾವಂತರು, ಕೆಂಪು ದೀಪವಿದ್ದಾಗ ಕಾರ್ ನಿಲ್ಲಿಸಬೇಕು ಅಂತ ಗೊತ್ತಿಲ್ಲವೇ ?" ಅಂತ ಕೇಳಿದಾಗ, ಗೌಡರು "ಖಂಡಿತಾ ಗೊತ್ತಿತ್ತು ಸ್ವಾಮೀ. ಆದರೇನು ಮಾಡಲಿ. ಕಾರಿಗೆ ಬ್ರೇಕೇ ಇರಲಿಲ್ಲವಲ್ಲಾ" ಎಂದು ಪೇಚಾಡಿದರಂತೆ.

ಗೌಡರ ರೀತಿ ಹೀಗಾದರೆ. ಪದ್ಮಜಮ್ಮನವರದು ತೀರ ವ್ಯತಿರಿಕ್ತ. ಎಲ್ಲದ ರಲ್ಲೂ ಅತೀ ಜಾಗರೂಕತೆ. ಕಾರ್ ಡ್ರೈವ್ ಮಾಡುತ್ತಿರುವಾಗ, ಒಂದು ವೇಳೆ ಪೆಟ್ರೋಲ್ ಮುಗಿದು ಹೋಗಿ ಕಾರನ್ನು ನೂಕಬೇಕಾಗುವ ಪ್ರಸಂಗ ಬರದಿರಲೆಂದು ಡಿಕ್ಕಿಯಲ್ಲಿ ಒಂದು ಡಬ್ಬ ಪೆಟ್ರೋಲ್ ಇಟ್ಟಿರುತ್ತಾರೆ. ಒಂದು ರಾತ್ರಿ ಸ್ಯಾಂಕೀ ರಸ್ತೆಯಲ್ಲಿ ಬರುತ್ತಿರುವಾಗ ಕಾರು ಹಠಾತ್ತನೆ ನಿಂತಿತು. ಪೆಟ್ರೋಲ್ ಮುಗಿದಿರ ಬಹುದೆಂದು ಪದ್ಮಜಮ್ಮನವರು ಡಿಕ್ಕಿ ತೆಗೆದರು. ನಿಂತ ಜಾಗದಲ್ಲಿ ತೀರ ಕತ್ತಲೆ. ಪೆಟ್ರೋಲ್ ಡಬ್ಬ ಯಾಕೋ ಸ್ವಲ್ಪ ಹಗುರವಾಗಿ ಕಾಣಿಸಿತು. ಯಾವ ವಿಷಯ ವನ್ನಾದರೂ, ಕೂಲಂಕಷವಾಗಿ ಪರಿಶೀಲಿಸುವುದು ಪದ್ಮಜಮ್ಮನವರಿಗೆ ಮೊದಲಿನಿಂದ ಬಂದ ಗುಣ. ಸರಿ ಒಂದು ಬೆಂಕಿ ಕಡ್ಡಿ ಗೀರಿ ಡಬ್ಬದಲ್ಲಿ ಪೆಟ್ರೋಲ್ ಇದೆಯೇ ಅಂತ ನೋಡಿದರು. ಮುಂದಿನ ಕ್ಷಣದಲ್ಲಿಯೇ ಪದ್ಮಜ, ಜಲಜ ಆಗಿದ್ದರು. ಡಬ್ಬ ಸಿಡಿದ ರಭಸಕ್ಕೆ ಅವರು ಸ್ಯಾಂಕೀ ಕೆರೆಗೆ ನೂಕಲ್ಪಟ್ಟು. ಕೆಸರಿನಲ್ಲಿ ಕೂತು ತಲೆ ಮಾತ್ರ ನೀರಿನ ಮೇಲಿದ್ದ ದೃಶ್ಯ ಕಮಲದ ಹೂವಿನಂತೆ ಕಂಗೊಳಿಸುತ್ತಿತ್ತು. ಅಂದಿನಿಂದ ಕಾರ್ ಎಂದರೆ ಬೆಚ್ಚುತ್ತಾರೆ, ಪಾಪ ಪದ್ಮಜಮ್ಮ.

ಸದಾಶಿವನಗರದಲ್ಲಿ ಸಮಾಜವಾದ

ಅಂದು ಮಧ್ಯಾಹ್ನ ಸದಾಶಿವ ನಗರದಲ್ಲಿ ನಡೆದು ಹೋಗುತ್ತಿದ್ದೆ. ವಿಧಾನ ಸೌಧ ದಯಪಾಲಿಸಿದ ಸೌಧಗಳು. ಎಲ್ಲೆಲ್ಲಿ ನೋಡಿದರೂ ಶ್ರೀಮಂತಿಕೆ ಕಣ್ಣು ಕುಕ್ಕು ತ್ತಿತ್ತು. ಒಂದೊಂದು ಮನೆಯೂ ಒಂದೊಂದು ಮಹಲ್. ಹಾಗೇ ನಡೆಯು ತ್ತಿದ್ದಾಗ ಬಲಪಕ್ಕದ ಬಂಗಲೆಯೊಂದರಲ್ಲಿ ಒಂದು ವಿಚಿತ್ರ ದೃಶ್ಯ ಕಾಣಿಸಿತು. ನೋಡುತ್ತಾ ನಿಂತೆ.

ಒಬ್ಬ ಸುಂದರ ತರುಣಿ. ತರುಣಿ ಏನು. ಹೆಂಗಸು. ಮೂವತ್ತು ವಯಸ್ಸಿರಬಹುದು. ಮನೆಯೊಡತಿಯ ಹಾಗೆ ಕಾಣುತ್ತಿತ್ತು. ಮುಂದಿನ ಮೆಟ್ಟಿಲ ಮೇಲೆ ಕುಳಿತಿದ್ದಳು. ಅವಳ ಕಾಲ ಬಳಿ ನಾಲ್ಕಾರು ಕೊಳೆಗೇರಿ ಮಕ್ಕಳು. ಒಂದೊಂದು ಮಗುವೂ ತೀರ ಕೊಳಕು. ಹರುಕಲು ಚಿಂದಿ ಬಟ್ಟೆ. ನೀರು ಕಾಣದ ಜಡ್ಡುಗಟ್ಟಿದ ಕೂದಲು ಇತ್ಯಾದಿ. ಮನೆಯೊಡತಿ ಏನೋ ಕಥೆ ಹೇಳುತ್ತಾ ಇದ್ದ ಹಾಗಿತ್ತು. ಇದ್ದಕ್ಕಿದ್ದ ಹಾಗೆಯೇ ಆಕೆ. ಒಂದು ಮಗುವನ್ನು ಅನಾಮತ್ತಾಗಿ ಎತ್ತಿ, ತೊಡೆಯ ಮೇಲೆ ಕೂರಿಸಿಕೊಂಡು ಹಾಡು ಹೇಳಲು ಶುರು ಮಾಡಿದಳು. ನನಗೆ ತಲೆ ತಿರುಗಿತು. ಸಮಾಜವಾದದ ಬಗ್ಗೆ ಕೇಳಿದ್ದೆ. ಓದಿದ್ದೆ. ಹೀಗೆ ಪ್ರತ್ಯಕ್ಷವಾಗಿ ನೋಡಿರಲಿಲ್ಲ. ಭಾರತಾಂಬೆ ಧನ್ಯಳು ಎಂದು ಕೊಳ್ಳುತ್ತಿರುವಾಗಲೇ, 'ಕಟ್' ಎಂದು ಯಾರೋ ಕೂಗಿದಂತಾಯಿತು. ಪಕ್ಕದ ಪೊದೆಯೊಳಗಿಂದ ವಿಡಿಯೋ ಕ್ಯಾಮರಾ ಹಿಡಿದ ಜೀನ್ಸ್‌ಧಾರಿ ಹೊರಬಂದ. ನಮ್ಮ ಹೀರೋಯಿನ್ ಮಗುವನ್ನು ಧಡಕ್ಕನೆ ನೆಲಕ್ಕೆ ಕುಕ್ಕಿ, " EEEKK, I must have a bath ! " ಎನ್ನುತ್ತಾ ಒಳಗೋಡಿದಳು. ಟಿ. ವಿ. ಸಮಾಜವಾದ ನೋಡಲು ಚೆನ್ನ.

ಕೃಷ್ಣ ಆಯ್ಯರ್

ನಮ್ಮ ದೇಶದ ಹಿರಿಯ ಚಿಂತಕ ಹಾಗೂ ಮಾಜೀ ನ್ಯಾಯಾಧೀಶ, ಶ್ರೀಯುತ ಕೃಷ್ಣ ಅಯ್ಯರ್‌ರವರು ಬೆಂಗಳೂರಿನಲ್ಲಿ ಸಣ್ಣ ಕೈಗಾರಿಕೋದ್ಯಮಿಗಳನ್ನುದ್ದೇಶಿಸಿ ಮಾತನಾಡುತ್ತಾ, "ದೇಶದ ಒಟ್ಟು ಉತ್ಪಾದನೆಯ ಶೇಕಡ ಐವತ್ತು ಭಾಗವನ್ನು ನೀಡುತ್ತಿರುವ ಸಣ್ಣ ಕೈಗಾರಿಕೆಗಳ -ಸಂರಕ್ಷಣೆಗೆ ಕಾಯಿದೆ ಅತ್ಯವಶ್ಯಕ. ವಿವಾಹ ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗಾಗಿ ಪ್ರತ್ಯೇಕ ಕಾಯಿದೆ ಸಾಧ್ಯವಾದರೆ, ನಿಮಗೇಕೆ ಸಾಧ್ಯವಾಗಬಾರದು ? ನಿಮ್ಮ ಉತ್ಪಾದನೆ ಏನು ? ಅವರ ಉತ್ಪಾದನೆ ಏನು ?" ಅಂದರಂತೆ.

ದೇಶದ ಹಿರಿಯ ಚಿಂತಕರೆಲ್ಲಾ ಇದ್ದದು ಇದ್ದಹಾಗೆ ಹೇಳಿದರೆ, ಭವಿಷ್ಯ ನಿಜಕ್ಕೂ ಆಶಾದಾಯಕ ಅಲ್ಲವೇ !

ನವ್ಯ ಶಿಶುಗೀತೆಗಳು

(ಸೀಟಿನ ಬೇಟೆ) —ಅಶೋಕ್

ಬಣ್ಣದ ಮಡಿಕಲ್ ಸೀಟನ್ನ
ಕಾಸಿಗೆ ಕೊಂಡನು ರಾಜಣ್ಣ
ಸರ ಸರ ಸರಸರ ಪ್ಯಾಸಿದನು
ರೋಗಿಯು ಕೊನೆಯುಸಿರೂದಿದನು

ಸೀಟ್ಟೇ, ಸೀಟೇ, ಮುದ್ದಿನ ಸೀಟೆ
ಮಂತ್ರಿಯ ಜೇಬಲಿ ನಿನ್ನಯ ತಾವ
ಕೈಗಳ ಮುಗಿವೆ, ಕಾಸನ್ನೀವೆ
ಬಾ ಬಾ ಬಾ ಬಾ ಬಾ

ಒಂದು ಎರಡು
ಬಲೆಯನು ಹರಡು
ಮೂರೂ ನಾಕು
ಗಾಳಾ ಹಾಕು
ಐದೂ ಆರೂ
ಲಕ್ಷಕೆ ನೀರು
ಏಳೂ ಎಂಟು
ಸೀಟದು ಗಂಟು
ಒಂಭತ್ತೂ ಹತ್ತು
ಕಾಲೇಜ್ ಮೆಟ್ಲೊತ್ತು.

ಅಪರಂಜಿ ಸ್ಪರ್ಧೆ

ಕರ್ನಾಟಕ ಮಂತ್ರಿಮಂಡಲ, ದೇಶದಲ್ಲೇ ಅತ್ಯಂತ ಕಿರಿದಾಗಿದೆ. ಮುಂದಿನ ನವೆಂಬರಿನಲ್ಲಿ ಇದನ್ನು ವಿಸ್ತರಿಸುವ ಸೂಚನೆಗಳಿವೆ. ಸಹಜವಾಗಿಯೇ ಅನೇಕ ಅಭ್ಯರ್ಥಿಗಳು, ಮಂತ್ರಿ ಸ್ಥಾನಗಳಿಗೆ ಯತ್ನ ನಡೆಸುವುದಂತೂ ಖಂಡಿತ. ಇವರೆಲ್ಲರೂ ಟಿ. ವಿ. ಯನ್ನು ಮೊರೆಹೊಕ್ಕರೆ, ಈಗಿನ ಸಾಬೂನು, ಬಟ್ಟೆ ಒಗೆಯುವ ಪುಡಿ, ಸೌಂದರ್ಯ ಸಾಧನಗಳ ಜಾಹೀರಾತುಗಳಂತೆ, ಈ ಪುಡಾರಿಗಳೂ ತಮ್ಮ ಇಮೇಜ್‌ನ ಜಾಹೀರಾತುಗಳ ಮೂಲಕ ಬಿತ್ತರಿಸಿ ಮುಖ್ಯ ಮಂತ್ರಿಗಳ ಮನವೊಲಿಸಿಕೊಳ್ಳುವ ಪ್ರಯತ್ನ ನಡೆಸಿದರೆ ಹೇಗಿರುತ್ತೆ ? ಇದನ್ನು ಊಹಿಸಿಕೊಂಡು ಒಂದು ಜಾಹೀರಾತನ್ನು ಕಳಿಸಿಕೊಡಿ. ಉತ್ತಮವಾದುದನ್ನು ಪ್ರಿಂಟಿಸುವುದರ ಜೊತೆಗೆ, ಒಂದು ವರುಷದ ಅಪರಂಜಿ ಬಳುವಳಿ ನೀಡಲಾಗುವುದು. ಕೊನೆ ದಿನಾಂಕ ಆಗಸ್ಟ್ 31ನೇ ತಾರೀಖು.

ರಾಮೇಶ್ವರಕ್ಕೆ ಹೋದ್ರೂ

—ಸೂಂ

ಮುಂಚೆ ನಾನು ಸರಿಯಾಗೇ ಇದ್ದೆ. ಈಚೆಗೆ ಒಂದು ನಾಕೈದು ವರ್ಷ ದಿಂದಲೀ ಅಂತ ಹೇಳಬಹುದು. ನಾನು ಈ ರೀತಿ ಯಾವಾಗಲೂ ಯಾವದಾದರೂ ಚಿಂತೇನ ತಲೆಗೆ ಹಚ್ಚಿಕೊಂಡು ಒದ್ದಾಡ್ತಾ ಇರೋದು. ನನ್ನ ತಲೇ ತಿನ್ತಾ ಇರೋ ವಿಷಯಗಳಾದರೂ ಎಂಥಹವು ಅನ್ತೀರ–ಯಾರ ಮುಂದಾದರೂ ಹೇಳಿಕೊಂಡೆ ಅಂದ್ರೆ ನಕ್ಕು ಬಿಡ್ತಾರೆ, ಅಷ್ಟೆ. ಆದರೆ ಈ ಚಿಂತೆಗಳು ತಲೇಲಿ ಇರೋ ತನಕಾ ನನ್ನ ಅವಸ್ಥೆ ಬೇಡ ಬೇಡ. ಆಯ್ತು. ಹೋಗೋವಾಗಾದರೂ ಸುಮ್ನೆ ಹೋಗತ್ವಾ ಇವು? ಊಹುಂ. ಮತ್ತೆ ಒಂದೋ ಎರಡೋ ಹೊಸ ಚಿಂತೆಗಳನ್ನ ಮರಿ ಹಾಕೇ ಹೋಗತ್ವೆ.

ನಾನೂ ಪರಿಸ್ಥಿತೀನ ಸುಧಾರಿಸೋಕೇ ಅಂತ ಏನೆಲ್ಲ ಮಾಡಿಲ್ಲ. ಯೋಗ, ಮೆಡಿಟೇಷನ್ನು. ಗುಳಿಗೇಗಳು ಒಂದೇ ಎರಡೇ. ಯಾವುದೂ ಪ್ರಯೋಜನಕ್ಕೆ ಬರಲಿಲ್ಲ ಅಷ್ಟೆ. ಕಡೇಗೆ. ಒಂದು ಸಾರಿ NIMHANSಗೆ ಹೋಗಾದರೂ ತೋರಿಸ್ಕೊಂಡು ಬರೋಣವೇ ಅಂತಲೂ ಆಲೋಚನೆ ಬಂತು. ಆದರೆ, ಆಮೇಲೆ ಸದ್ಯ, ವಿಷಯ ಅಕ್ಕಾ ಪಕ್ಕದವರಿಗೆ ಗೊತ್ತಾಗಿ ಬಿಟ್ಟು, ನನಗೆ ತಲೇ ಸರೀ ಇಲ್ಲ ಅಂತ ಪುಕಾರು ಹುಟ್ಟಿದ್ರೆ ಎಲ್ಲೀ ಗ್ರಹಚಾರ ಅಂದ್ಕೊಂಡು ಆ ಯೋಚನೆ ಬಿಟ್ಟಿದ್ದಾಯಿತು.

ಮುಂಚೆ ಮುಂಚೆ ನನ್ನ ಅವಸ್ಥೇನ ನೋಡಿ ತಮಾಷೆ ಮಾಡ್ತಾ ಇದ್ದ ನನ್ನೆಂಡತೀಗೂ ಈಗೀಗ ಅರ್ಥವಾಗ್ತಾ ಇದೆ, ನಕ್ಕು ಬಿಟ್ಟು ಉಡಾಯಿಸೋ ಅಷ್ಟು ಹಗುರಾ ಅಲ್ಲ ವಿಷಯಾ ಅಂತ. ಅವಳೂ ಪಾಪ ಏನಾದರೂ ಒಂದು ತನ್ನ ಕೈಲಾದ್ದನ್ನ ಮಾಡ್ತಾನೂ ಇರ್ತಾಳೆ. ಕಂಡ ಕಂಡ ದೇವರುಗಳಿಗೆಲ್ಲಾ ಹರಕೆ ಹೊರೋದು, ಊರಲ್ಲಿರೋ ಜೋಯಿಸರುಗಳ ಹತ್ರವೆಲ್ಲ ನನ್ನ ಜಾತಕ ತೋರಿಸೋದು, ಅಷ್ಟೇಕೆ ಒಂದೆರಡು ಸಲ ಮಾರ್ಕೆಟ್ ಹತ್ತಿರ ಹಕ್ಕೀ ಶಾಸ್ತ್ರಾನೂ ಕೇಳೋದು ಕೂಡ ಮಾಡಿದ್ದಾಳೆ.

ಮೊನ್ನೆ ಶನಿವಾರ ನಾನು ಆಫೀಸಿಂದ ಬರೋ ಹೊತ್ತಿಗೆ ಇವಳು ಒಂದು ಹೊಸಾ ಸಲಹೆ ಇಟ್ಟುಕೊಂಡು ಕಾಯ್ತಾ ಇದ್ಳು.

"ರೀ, ಇವತ್ತು ಮಧ್ಯಾಹ್ನ ಪಾತಕ್ಕ ಬಂದಿದ್ರು. ಮೈಸೂರು ರಸ್ತೆ ಘಾಳೀ ಆಂಜನೇಯ ಬಹಳಾ ಸತ್ಯ ಅಂತ. ಒಂದು ಸಲ ಹೋಗಿ ಅಷ್ಟೋತ್ತರ ಮಾಡಿ ಸ್ಕೊಂಡು ಬಂತೂ ಅಂದ್ರು ನಿಮಗೆ ಖಂಡಿತಾ ತೊಂದರೆ ಪರಿಹಾರ ಆಗತ್ತಂತೆ. ನಾಡಿದ್ದು ಸೋಮವಾರ ನಿಮಗೆ ಹ್ಯಾಗೂ off ಇದೆಯಲ್ಲ, ಹೋಗಿ ಬರೋಣವಾ ?"

ಹೀಗಾಗಿ ನಾವು ಈವತ್ತು ಬೆಳಿಗ್ಗೆ ಆ ಗುಡೀಗೆ ಬಂದಿದ್ದು. ನನಗೇನೂ ದೇವರಲ್ಲಿ ಭಯ. ಭಕ್ತಿ ಇಲ್ಲಾ ಅಂತಲ್ಲ. ಆದರೂ ಒಂದು ಅನುಮಾನ. ಅಲ್ಲ, ಒಂದೊಂದು ಗುಡೀಲೂ ಸಾವಿರಾರು ಜನ ಭಕ್ತರು ಅದು ಕೊಡು, ಇದು ಕೊಡು, ಅಂತ ಈಗಾಗಲೇ ಹಾಕಿಕೊಂಡಿರೋ ಅಹವಾಲುಗಳನ್ನೇ ಇನ್ನೂ ವಿಲೇವಾರಿ ಮಾಡೊಕ್ಕೆ ಆಗ್ದೇ ಇರೋವಾಗ, ಈಗ ನಾನೂ ಒಂದು ಹೊಸಾ ಅರ್ಜಿ ಹಾಕಿದೇ ಅಂದರ ಅದು ಫೈಸಲ್ ಆಗೋದಾದರೂ ಯಾವ ಕಾಲಕ್ಕ ?, ಆದರೆ ಇವಳಿಗೋ, ಅಂಥಾ ಯಾವ ಸಂದೇಹಾನೂ ಇದ್ದ ಹಾಗೆ ಕಾಣಿಸ್ಲಿಲ್ಲ. ಹನುಮಂತ ರಾಯ ಖಂಡಿತಾ ಬೇಗ ಫಲಾ ಕೊಡ್ತಾನ ಅನ್ನೋ ಭರವಸೆ ಅವಳ ಮುಖದಲ್ಲಿ.

"ರೀ ಈ ಸ್ವಾಮಿ ಮಹಾತ್ಮೆ ಎಂಥಾದ್ದು ಅಂತ ನೋಡಿದ್ರಾ ? ಗುಡೀ ಹತ್ರ ಬರೋಕ್ಕಿಲ್ಲ ಆಗಲೇ ಒಂದು ಥರಾ ಮನಸ್ಸಿಗೆ ಹಾಯಿ ಅನಿಸ್ತಾ ಇದೆ ಅಲ್ವಾ ?"

—ಗುಡಿಯ ಮುಂದೆ ಚಪ್ಲೀ ಬಿಡ್ತಾ ಇವಳು ಸಂತೋಷದಿಂದ ಹೇಳಿದ ಮಾತಿದು.

ಇವಳ ಮಟ್ಟಿಗೇನೋ ಆ ಮಾತು ನಿಜಾ ಇದ್ದಿರಬಹುದು. ಆದರೆ ನನಗಂತೂ ಅದೇ ಘಳಿಗೇಲ ಒಂದು ಹೊಸಾ ಚಿಂತೆ ಆರಂಭ. ಏನಿಲ್ಲ, ಆ ಚಪ್ಲೀ ನೋಡ್ಕೊಳ್ಳೊ ಹುಡುಗಾ ಕೊಟ್ಟನಲ್ಲ ಆ ಟೋಕನ್ನು—ಅದು ಆರನೇ ನಂಬರೋ ಒಂಭತ್ತನೇ ನಂಬರೋ ಸರಿಯಾಗಿ ಗೊತ್ತಾಗೋ ಥರಾ ಇರಲಿಲ್ಲ. ಹಾಗೇಂತ ಕೇಳಿ ದ್ದಕ್ಕೆ ಅವ.

"ಸಾರ್ ನಿಮ್ಮ ನಂಬರು ಒಂಭತ್ತೇ ಸಾರ್. ಇಲ್ಲಿ ನೋಡಿ, ಆರನೇ ನಂಬರ್ನೋವು ಇಲ್ಲಿವೆ"-ಅಂತ ಆರನೇ ನಂಬರ್ ಗೂಡಿನಲ್ಲಿದ್ದ ತ್ಯಾಪೇ ಹಾಕಿದ್ದ. ಎರಡು ಜತೇ ಚಪ್ಲಿಗಳನ್ನ ತೋರಿಸ್ದ. ನನಗೂ ಸಮಾಧಾನ ಆದ ಹಾಗೆ ಆಗಿ ಒಳಕ್ಕೆ ಹೋದೆ.

ಆದರೆ ದೇವರ ಮುಂದೆ ಹೋಗಿ ನಿಲ್ಲೋ ಹೊತ್ತಿಗೆ ಆ ಸಮಾಧಾನವೆಲ್ಲ ಹಾರಿಹೋಗಿ ಮತ್ತೆ ಅದೇ ವಿಷಯದ ಬಗ್ಗೆ ಚಿಂತೆ ಅಂಟಿಕೊಂಡ್ತು. ಅಲ್ವಾ?

ಆ ಹುಡುಗ ನನಗೆ ಏನೇ ಹೇಳಿದ್ರೂನೂವೇ. ಅಕಸ್ಮಾತ್ ಆ ಆರನೇ ನಂಬರಿನವರು ನನಗಿಂತ ಮುಂಚೆ ಹೊರಗೆ ಬಂದು ಟೋಕನ್ನು ಕೊಟ್ರೆ, ಮಿಸ್ಟೇಕ್ ಮಾಡ್ಕೊಂಡು ನಮ್ಮ ಚಪ್ಲೀಗಳನ್ನ ಅವರಿಗೆ ಕೊಟ್ಟು ಬಿಡೊಲ್ಲ ಅನ್ನೋದು ಯಾವ ಗ್ಯಾರಂಟಿ ? ನಿಯತ್ತಿನ ಜನಗಳಾದರೇನೋ ಪರವಾಗಿಲ್ಲ, ನಮ್ಮದು ಹರಕು ಚಪ್ಲೀ ನಪ್ಪ ಅಂತ ಹೇಳಿ ನಮ್ಮದನ್ನ ವಾಪಸು ಮಾಡಬಹುದು. ಆದರೆ, ಸಿಕ್ಕಿದ್ದೇ ಸಾಕು ಅನ್ನೋ ಜನಗಳಾಗಿದ್ರೆ ?-ನಂದೂ ಇವಳದ್ದೂ ಇಬ್ಬರದ್ದೂ ಹೊಸಾ ಚಪ್ಲೀಗಳು ಉಢೀಸ್ ಅಷ್ಟೆ.

ಛೆ, ಎಂಥಾ ಕೆಲಸಾ ಆಗಿ ಹೋಯ್ತು. ಅಲ್ಲ, ಇರೋ ಚಿಂತೆಗಳನ್ನ ಪರಿಸ್ಕೊಳ್ಳೋಣ ಅಂತ ಬಂದ್ರೆ, ಇಲ್ಲೇ ಒಂದು ಹೊಸಾ ಚಿಂತೆ ಶುರೂ ಆಯ್ತಲ್ಲ ?

ಅರ್ಚಕರು ಅಷ್ಟೋತ್ತರ ಶುರೂ ಮಾಡ್ಕೊಂಡರೂ ನನ್ನ ಮನಸ್ಸೆಲ್ಲಾ ಹೊರಗಡೇ ಇದ್ದ ಚಪ್ಲೀಗಳ ಮೇಲೇನೆ. ಎಷ್ಟು ತಲೇ ಕೆರಕೊಂಡ್ರೂ ಹಾಳಾದ್ದು, ಯಾವ ಮಾರ್ಗಾನೂ ಕಾಣಲೊಲ್ಲದು ......

... Eureka ! ಅರೆ, ಹೀಗೆ ಮಾಡಿದ್ರೆ ? ಈಗಲೇ ಆ ಚಪ್ಲೀ ಹುಡುಗನ ಹತ್ರಾ ಹೋಗೋದು, ನಮ್ಮ ಚಪ್ಲಿಗಳನ್ನ ಹನ್ನೊಂದನೇ ನಂಬರಿನ ಗೂಡಿಗೆ ಬದಲಾಯಿಸೋದು, ಒಂಬತ್ತನೇ ನಂಬರ್ ಬದಲು ಹನ್ನೊಂದನೇ ನಂಬರ್ ಟೋಕನ್ನು ತಗಳ್ಳೋದು–ಆವಾಗ, ಎಷ್ಟೇ ತಿರುಗಾ ಮುರುಗಾ ಮಾಡಿದ್ರೂ ಹನ್ನೊಂದು ಹನ್ನೊಂದೇ–ಅಂದ್ರೆ ನಮ್ಮ ಚಪ್ಲೀಗಳು ಭದ್ರ ....

ಆದರೆ ಈ ಐಡಿಯಾ ಬರೋದಕ್ಕೂ, ಅಲ್ಲಿ ಮಂಗಳಾರತೀ ಶುರೂ ಆಗೋದಕ್ಕೂ ಸರೀ ಹೋಗಿದ್ದರಿಂದ ನನಗೆ ಜಾಗ ಬಿಡೋಕ್ಕೆ ಆಗದೇ ಹೋಯಿತು.

ಮಂಗಳಾರತೀ ಆಗ್ತಾ ಇದ್ದ ಅಷ್ಟುಹೊತ್ತೂ ದೇವರನ್ನ ನಾನು ಭಕ್ತಿಯಿಂದ ಬೇಡಿಕೊಂಡಿದ್ದು ಇಷ್ಟೇ–"ಅಪ್ಪಾ ಘಾಳಿ ಹನುಮಂತರಾಯಾ, ನಮ್ಮ ಹೊಸ ಚಪ್ಲೀಗಳು ಹವಾ ಆಗ್ದೆ ಇರೋ ಹಾಗೋ ನೋಡ್ಕೋ" ಅಷ್ಟೊಂದು ಶ್ರದ್ಧೆ, ಭಕ್ತಿಯಿಂದ ಯಾವ ದೇವರನ್ನೇ ಆಗಲಿ ನಾನು ಬೇಡಿಕೊಂಡಿದ್ದು ಇದೇ ಮೊದಲು ಅನ್ನಬಹುದು.


ತೀರ್ಥಾ, ಪ್ರಸಾದಾ ಆಗೋದೇ ತಡ, ನಾನು ಆಚೆಗೆ ಓಡಿದೆ. ಸದ್ಯ, ನಮ್ಮ ಚಪ್ಲೀಗಳು ಅಲ್ಲೇ ಭದ್ರವಾಗಿ ಇದ್ವು. ಆ ಹುಡುಗನ ಹತ್ರಾ ನಮ್ಮ ಚಪ್ಲೀಗಳನ್ನು ಇಸಕೊಂಡು, ಅವನ ಕೈಗೆ ಒಂದು ರೂಪಾಯಿ ಹಾಕಿ, ಚಿಲ್ಲರೇ

ಕಾಸಿಗೂ ಕಾಯದೇ, ಇವಳು ಬರೋದನ್ನೆ ಕಾಯ್ತಾ ಅಲ್ಲೇ ಖುಷಿಯಾಗಿ ನಿಂತು ಕೊಂಡಿದ್ದೆ.

ನವಗ್ರಹಗಳೀಗೆ ನಮಸ್ಕಾರ ಹಾಕಕೊಂಡು ಆಚೆ. ಬಂದ ಇವಳಿಗೆ ನನ್ನ ಮುಖ ನೋಡಿ ಏನನಿಸ್ತೋ.

"ಈ ಆಂಜನೇಯ ನಾವು ಅಂದುಕೊಂಡದ್ದಕ್ಕಿಂತ ತುಂಬಾ ಸತ್ಯಾ, ರೀ. ಅಲ್ಲ ನೋಡಿ, ಒಂದು ಸಲಾ ಒಂದು ನಮಸ್ಕಾರ ಹಾಕೋಕ್ಕಿಲ್ಲ, ಆಗಲೇ ನಿಮ್ಮ ತಲೇಲಿದ್ದ ಯಾವುದೋ ಭಾರೀ ಚಿಂತೆ ಪರಿಹಾರ ಆದ ಹಾಗೆ ಆಗಿ, ಮುಖಾ ಸಂತೋಷವಾಗಿದೆ"

ಹೌದು, ಅನ್ನೋ ಥರದಲ್ಲಿ ನಾನು ತಲೇ ಆಡಿಸ್ದೆ. ಆದರೆ ಪರಿಹಾರ ಆದ ಆ ದೊಡ್ಡ ಚಿಂತೆ ಯಾವುದೂ ಅಂತ ಮಾತ್ರ ಅವಳಿಗೆ ಹೇಳೋಕ್ಕೆ ಮನಸ್ಸು ಬರಲಿಲ್ಲ.



ಕ್ರಿಕೆಟ್ ಸ್ಕೋರಲ್ಲಾ ಸಾರ್ ಪಂಜಾಬ್ ಕೊಲೆ ಸ್ಕೋರು !

ನಂ ಕ್ಲಬ್ಬಿನಲ್ಲಿ

—ಅನಂದ್

ಕಳೆದ ವಾರ ನಂ ಕ್ಲಬ್ಬಿನಲ್ಲಿ ಒಂದು ಸೊಗಸಾದ ಕಾರ್ಯಕ್ರಮ. ಒಬ್ಬರು, ವನ್ಯ ಮೃಗಗಳು. ವಿವಿಧ ಪಕ್ಷಿಗಳ ಫೋಟೋ ತೋರಿಸಿ, ವಿವರಗಳನ್ನು ಕೊಟ್ರು. ನಮ್ಮ ದೇಶದಲ್ಲಿ ಎಂಥ ವಿಧ ವಿಧ ಪಕ್ಷಿಗಳಿವೆ ಅಂತ ನನ್ನಂಥ ಕುರಿಗಳಿಗೂ ಆಶ್ಚರ್ಯ. ಭಾಷಣಕಾರರು ಕಿಂಗ್ ಫಿಷರ್ ಅಂಬೋ ಚಿಕ್ಕ ಹಕ್ಕಿ ಚಿತ್ರ ತೋರಿಸಿದರು. ಅದಾದ ಮೇಲೆ ಐದು ನಿಮಿಷ ವಿರಾಮ. ಆಗ ಏಕೋ ಏನೋ ಹತ್ತಾರು ಸದಸ್ಯರು ಏನೋ ಮರೆತೋರಂತೆ ಹೊರಕ್ಕೆ ನಡೆದರು. ಆ ಪುಟ್ಟ ಹಕ್ಕೀಗೂ ಇವರೆಲ್ಲ ಹೋಗಿದ್ದಕ್ಕೂ ಏನು ಸಂಬಂಧ ? ಇನ್ನೂ ಉತ್ತರ ಸಿಕ್ಕಿಲ್ಲ ನಂಗೆ !

*   *   *   *   *

ರಾಮರಾಜ್ಯದಲ್ಲಿ

ಚಮಚ ಬಂದು ಹೇಳಿದ
ಮಹಾಸ್ವಾಮೀ
"ಬಿಟ್ಟ ಹೆಂಡತಿಯನ್ನಾಳಲು
ನಾನೇನು ರಾಮನೇ ?
ಎಂದನಾ ಡ್ರೈಕ್ಲೀನಿಂಗಿನಗಸ"
"ನೋ ಪ್ರಾಬ್ಲೆಮ್
ಹೋಗಿ ಲಕ್ಷ್ಮಣನಿಗೆ ಹೇಳು
ಆಕೇನ್ನೂ ಕರ್‍ಕೊಂಬಾಂತ"
ಎಂದನೀ ಅಭಿನವ ರಾಮ.

—ವೇದರಸ

ಕೃಷ್ಣ ಮತ್ತು ಹನುಮಂತ

—ಜಿ. ವಿ. ಗಣೇಶಯ್ಯ

ಶಿವಮೊಗ್ಗದಲ್ಲಿ ನಾನಿದ್ದ ಸಮಯ. ಕೃಷ್ಣಾಟಾಕೀಸಿನ ಹತ್ತಿರ ಒಂದು ಪುಟ್ಟ ಮಳಿಗೆ ಹಿಡಿದು ನನ್ನ ಫೋಟೋಗ್ರಫಿ, ಸೈನ್ ಬೋರ್ಡ್ ವ್ಯಂಗ್ಯ ಚಿತ್ರ – ಇತ್ಯಾದಿ ಚಟುವಟಿಕೆಗಳನ್ನು ಪ್ರಾರಂಭಿಸಿದ್ದೆ. ಸಂಜೆಯಾಯಿತೆಂದರೆ ಗೆಳೆಯರ ಗುಂಪು ನನ್ನ ಪುಟ್ಟ ಮಳಿಗೆಯಲ್ಲಿ ಠೇರಾಯಿಸಿ ಬಿಡುತ್ತಿತ್ತು. ಕೆಲಸವಿಲ್ಲದಾಗ ಸಮಯ ಕಳೆಯಲು ನನಗೆ ಯಾವ ತೊಂದರೆಯೂ ಆಗುತ್ತಿರಲಿಲ್ಲ.

ನನ್ನ ಗೆಳೆಯರ ಗುಂಪಿನಲ್ಲಿದ್ದವರಲ್ಲಿ ಹಲವರ ಕಿರುಪರಿಚಯ ಮಾಡಿ ಕೊಡುತ್ತೇನೆ. ಗುಂಡಮರಿ ಚಿತ್ರ ಕಲಾವಿದ. ಪುಟ್ಟಣ್ಣ–ಕಾಲೇಜು ವ್ಯಾಸಂಗದ ಜೊತೆಯಲ್ಲೇ ಚಿತ್ರಕಲೆಯ ಜಾಡ್ಯಕ್ಕೆ ಬಲಿಯಾದ ಕಿಲಾಡಿ ಮಾತುಗಾರ. ಸೂರಿ– ಸೈನ್ ಬೋರ್ಡ ಕಲಾಕಾರ, ಒಂದು ರೀತಿಯ ಪಾಪದ ವ್ಯಕ್ತಿ ಸುಂದರು– ಬಿಳೀ ಗುಂಡು ನಾಯಿಯೊಡನೆ ಬಂದು ಹರಟೆಕೊಚ್ಚಿ ಹೋಗುವಾತ. ಭಾಸ್ಕರ ಯೋಚಿಸಿ ಮಾತನಾಡುವಾತ. ಅನಂತು ಭಾಸ್ಕರನ ರೀತಿಯ ಇನ್ನೊಬ್ಬ.

ಗುಂಡ ಬಹಳಷ್ಟು ಕಷ್ಟಪಟ್ಟು ಜಲವರ್ಣದ ಕೃತಿಯೊಂದನ್ನು ರಚಿಸಿದ. 'ಕೊಳಲೂದುತ್ತಿರುವ ಕೃಷ್ಣ'ನ ಚಿತ್ರ ಅದು. ಅದರ ವಿಮರ್ಶೆ ಇಲ್ಲಿ ಬೇಡ. ಬಂದವರು, ಹೋದವರು, ಬಂದು ಹೋದವರು ಹೋಗಿ ಬಂದವರು, ಬರಲಿರುವವರು, ಹೋಗಲಿರುವವರು ಹೀಗೆ ಸಮಸ್ತರಿಗೂ ಆ ಚಿತ್ರವನ್ನು ತೋರಿಸಿ ಅವರಿಂದ ಎಲ್ಲ ಕಲಾವಿದರಂತೆ ಹೊಗಳಿಕೆಯನ್ನೋ, ಮೆಚ್ಚುಗೆಯನ್ನೋ ಬಯಸುತ್ತಿದ್ದ. ಸದರಿ ಕಲಾಕೃತಿಯು ಒಂದು ದಿನ ನಮ್ಮ ಗೆಳೆಯರ ಒಳಗದ ಮುಂದೂ ಬಂತು.

ಚಿತ್ರ ಬರೆದ ಇಸಮು ನೋಡುತ್ತಿರುವವನ ಮುಖವನ್ನೇ ನೋಡುವುದರಲ್ಲಿ, ಆ ಮುಖಕ್ಕೆ ಸಂಬಂಧಸಿದ ಬಾಯಿಯು ಆಡಲಿರುವ ಹೊಗಳಿಕೆಯ ಮಾತನ್ನು ಕೇಳುವುದರಲ್ಲಿ ಮಗ್ನನಾಗಿತ್ತು. ಒಟ್ಟಿನಲ್ಲಿ ಸರಾಸರಿ ಒಳ್ಳೆಯ ವಿಮರ್ಶೆಯೇ ಗೆಳೆಯರ ಬಳಗದಿಂದ ಲಭ್ಯವಾಯಿತೆನ್ನಬೇಕು. (ಇಲ್ಲದಿದ್ದರೆ ಅವನಿಗೆ ಕೋಪ)

ಆದರೆ, ನಮ್ಮ ಪುಟಣ್ಣನ ಸರದಿ ಬಂದಾಗ, "ಅಲ್ಲೋ ಗುಂಡ, ನನಗೊಂದು ಅನುಮಾನ" ಎಂದು ನಿಲ್ಲಿಸಿದ,

"ಏನಪ್ಪಾ ಅಂಥಾ ಅನುಮಾನ ನಿನಗೆ! " ಗುಂಡ ಅಸಹನೆಯಿಂದ ಕೇಳಿದ,

"ಏನಿಲ್ಲಾ, ಹನುಮಂತ ಯಾವಾಗ ಕೊಳಲು ನುಡಿಸಿದ, ಅಂತ"

ಎಂದಾಗ ಎಲ್ಲರ ಮುಖಗಳೂ ಗುಂಡನ ಮುಖದ ಕಡೆ ತಿರುಗಿದ್ದವು!

— ಡಾ॥ ಹೆಚ್. ವಿ. ಚಂದ್ರಶೇಖರ್

ಬ್ಯಾಂಕ್ ಒಂದನ್ನು ದೋಚಲು ಬಂದ ಕಳ್ಳರು ಎಲ್ಲರನ್ನು ಹೆದರಿಸಿ, ಕ್ಯಾಷಿಯರ್‌ನ ಕೈ ಕಾಲು ಕಟ್ಟಿ ಹಣವೆಲ್ಲವನ್ನೂ ದೋಚಿದರು.

ಹೋಗಬೇಕಾದರೆ ಒಬ್ಬ ಕನಿಕರದಿಂದ ಕ್ಯಾಷಿಯರ್‌ನ ಕಟ್ಟುಗಳನ್ನು ಬಿಚ್ಚಿದ

"ದಯವಿಟ್ಟು" ಕ್ಯಾಷಿಯರ್ ವಿನಂತಿಸದ "ಜೊತೆಗೆ ಲೆಕ್ಕದ ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಲೆಕ್ಕದಲ್ಲಿ 5,000 ರೂ ಕಡಿಮೆ ಬಂದಿದೆ. "

19

"ಹೆಲ್ಮೆಟ್ ಭ್ರಮೆ"

ಲಿಂಕ್ಸ್

ಹೊರಟಿತು ನನ್ನಯ ಸ್ಕೂಟರ್ ಸವಾರಿ।
ಕುಳಿತಳು ಹಿಂದ ನನ್ನ ಕುಮಾರಿ ।
ಇಳಿದಳು ಕೆಳಗೆ "ಬ್ರೆಡ್ಡನು" ತರಲು ।
ತುಂತುರು ಮಳೆ ಹನಿ ಬೀಳುತ್ತಿರಲು ।
ಬಂದಾ ಬಂದಾ ಕನ್ನಡಕ ಧಾರಿ ।
ಇನ್ನ್ಯಾರಲ್ಲ ಪೋಲೀಸ್ ಅಧಿಕಾರಿ ।
ಸಿಕ್ಕಿತು ಅವನಿಗೆ ಒಳ್ಳೆಯ ಬೇಟೆ ।
ಯಾರಿಗೆ ಬೇಕು ಪೋಲೀಸ್ ತೀಟೆ
ಏಯ್, ಮಿಸ್ಟರ್ ಎಲ್ಲಿ ನಿನ್ನ ಹೆಲ್ಮೆಟ್ ? ।
ಹೋಟೆಲಲ್ಲಿ ಮರೆತೆ ತಿನ್ನುವಾಗ ಆಮ್ಲೇಟ್ (ಸ್ವಗತ) ।
ಆದೋ ನೋಡು ದೀವದ ಅಡಿ ।
ಅವನೇ "ಸ್ಕೂಟರ್ ಯಜಮಾನ" ರೆಡ್ಡಿ।
ಅವನ ತಲೆಯಲಿ ಹೆಲ್ಮೆಟ್ ನೋಡಿ ।
ಸರ್ರನೆ ಇಲ್ಲಿಂದ ಬಿಡುಗಾಡಿ ।
ಮರು ಮಾತಿಲ್ಲದೆ ಪೋಲೀಸ್ ನಡೆದ ।
ಬದುಕಿತು ನನ್ನ ಬಡಜೀವ ಒಡೆದ ।
ಬಂದಳು ಕುಮಾರಿ ಬ್ರೆಡ್ ಸಮೇತ ।
ಬಹುದೂರ ಸಾಗಿತ್ತು ಪೋಲೀಸ್ ಪ್ರೇತ ।
ತಡಮಾಡದೆ ಬಿಟ್ಟೆವು ಗಾಡಿ ।
ಮನೆಯ ಸೇರಿದೆವು ಸಂತಸದಿ ಹಾಡಿ ।
ಪೋಲೀಸ್ ಹೋಗಿ ನೋಡಲು ತಲೆಯ ।
ಎಲ್ಲಿದೆ ಹೆಲ್ಮೆಟ್ ಬರಿ ಬೋಳು ತಲೆಯ ! ।

ಮರುದಿನ ವಿಷಯವು ಬೆಳಕಿಗೆ ಬಂತು ।
ಪೋಲೀಸ್‌ಗಾದ ಭಾರೀ ಗಸ್ತು ।
ತಿರುಪತಿಯಲ್ಲಿ ಮಾಡಿಸಿದ ಬೋಳು ।
ಪೋಲೀಸಿಗಾಯ್ತು ಸರಿಯಾದ ಗೋಳು ।
ಹೆಲ್ಮೆಟ್ ಮಾತ್ರ ಮರಯಲೆ ಬೇಡಿ ।
ನಂತರ ನನ್ನಂತೆ ಪೇಚಾಡ ಬೇಡಿ ।



ಇವರು ನನ್ನ ಮಕ್ಕಳು. ಒಬ್ಬ ಸೈನ್ಯದಲ್ಲಿದ್ದಾನೆ, ಇನ್ನೊಬ್ಬ ಆಟಗಾರ ಮತ್ತೊಬ್ಬ ಭಯೋತ್ಪಾದಕ

ಪ್ರಶ್ನೋತ್ತರ

—ಲೀಲಾ ಮಿರ್ಜಿ

ಗುಂಡಪ್ಪ, ಹಿರಿಯೂರು.

ಉರುಳು ಸೇವೆ ಎಂದರೇನು ?

—ರಾಜಕೀಯ ಪಕ್ಷಗಳು ಪರಸ್ಪರ ಸಲ್ಲಿಸುವ ಸೇವೆ.

ಜಯ ಮಂಜುಳ, ಹಿಂದೂಪುರ

ಸಿನಿಮಾ ನಟಿಯೋರ್ವಳಿಗೆ ಇಬ್ಬರು ಗಂಡಂದಿರಿದ್ದಾರೆ ಇದು ಧರ್ಮವೇನ್ರಿ ?

—ಇನ್ನೂ ಮೂವರನ್ನು ಜಮಾ ಮಾಡಬಹುದು ಅಲ್ಲವೇನ್ರಿ ?

ನರೇಶ್‌ಕುಮಾರ್, ಹೆಬ್ಬಾಳ.

ಪ್ರಪ್ರಥಮ Hijacker ಯಾರೆಂದು ತಿಳಿಸುವಿರಾ ?

—ತಮನೆಂಬ ರಾಕ್ಷಸ ಎರಡನೇಯವ ಹಿರಣ್ಯಾಕ್ಷ.

ರಾಧಾಮಣಿ, ಕೊಪ್ಪಸಂದ್ರ

ನಾನು ದಿನಾಗಲೂ ದೇವರನ್ನು ಪೂಜಿಸಿದರೂ ನನ್ನ ಕೋರಿಕೆಗಳು ಈಡೇರಿಲ್ಲ, ಏಕೆ?

'Familiarity breeds contempt' ಅಂತ ಕೇಳಿಲ್ಲವೇ ?

ಕೆಂಪಣ್ಣ, ಬೆಂಗಳೂರು.

ಹಿಂದಿ ಕಲಿಯಬೇಕೆಂದಿದ್ದೇನೆ- ಏನು ಮಾಡಲಿ?

—ಬೇಗ ಟಿ. ವಿ. ಕೊಂಡುಕೊಳ್ಳಿ.

ಪುರುಷೋತ್ತಮ, ಜೆ. ಪಿ. ನಗರ.

ಕೋಟಿಗಟ್ಟಲೆ ಹಣವನ್ನು ಅನ್ಯಾಯವಾಗಿ ಗಿಟ್ಟಿಸಿದರೂ ಜೈಲಿಗೆ ಹೋಗದೆ, ಸುಖವಾಗಿರುವವನ್ನು ಏನನ್ನಬೇಕು ?

—ಪುಣ್ಯಕೋಟಿ

ಪ್ರೇಮನಾಥ್, ವಸಂತಪುರ.

ನಮ್ಮ ಮುಂದಿನ ಬೀದಿಯಲ್ಲಿ ಗಂಡಹೆಂಡತಿ ಒಬ್ಬರನ್ನೊಬ್ಬರು ತುಂಬ ಪ್ರೀತಿಸುತ್ತಾರೆ, ಟೀಕಿಸಿ.

—ಟೀಕೆ ಏಕೆ. ಆತ ಯಾರ ಗಂಡ ಆಕೆ ಯಾರ ಹೆಂಡತಿ ಅಂತ ನೀವು ಸ್ಪಷ್ಟಪಡಿಸಿಲ್ಲ !

ಹ್ಯಾಲೀ ಗಾದೆಗಳು

ಆನಂದ್

---

1 ಏನೋ ಬೋರೀ ತಾರಾಟ ?
ಅಲ್ನೋಡಿ ಹ್ಯಾಲೀ ಹಾರಾಟ !

2 ಅಲ್ಪನಿಗೆ ಐಶ್ವರ್ಯ ಬಂದರೆ....
ಅರ್ಧ ರಾತ್ರೀಲಿ ದುರ್ಬೀನು ಹಿಡಿದನಂತೆ.

3 ಪಾಪಿ ಹ್ಯಾಲೀ ನೋಡುಕ್ಕೆ ಹೋದರೆ,
ಆಗಸದಲ್ಲೆಲ್ಲ ಮೋಡ !

4 ಹ್ಯಾಲೀ ನೋಡೋಣ ಬಾರೋ ಅಂದರೆ,
ಬೆಳಗ್ಗೆ ನೋಡೋಣ ಅಂತ ಮುಸುಕೆಳೆದನಂತೆ !

5 ನೋಡ್ತಾ ನಿಂತ್ಕೊಂಡ ಹ್ಯಾಲೀ
ಬರ್ತಾ ನೋಡಿದ್ರೆ ಜೇಬು ಖಾಲೀ !

6 ಅಲ್ಲಿ ನೋಡೋ ಧೂಮಕೇತು ಅಂದರೆ....
ನಂ ಪಾರ್ಟೀನೇ ತರಿಸಿದ್ದು ಅನ್ನೋದೆ ?

7 ಇರುಳು ಕಂಡ ಹ್ಯಾಲೀಗೆ ತಿರುಳೇ ಇಲ್ಲವಂತೆ.

ಇಂಗ್ಲಿಷಿಗೆ ಕುತ್ತು ಬಂದಿದೆಯೋ

—ಎಸ್. ಗಣೇಶ್

ರಾಷ್ಟ್ರೀಯ ಪತ್ರಿಕೆಯೊಂದರಲ್ಲಿ, ಇಂಗ್ಲಿಷ್ ಸಾಯುತ್ತಿದೆಯೋ ಎಂಬ ವಾದ ವಿವಾದ ಇತ್ತೀಚೆಗೆ ಬಂತು. ಸನ್ಮಾನ್ಯ ವಿದ್ವಾಂಸರಿಬ್ಬರು ಸಾಯುತ್ತಿದೆ ಸಾಯುತ್ತಿಲ್ಲ ಎಂದು ವಾದಿಸಿದರು.

ವಿಶ್ವ ವಿಶಾಲವಾಗಿದೆ. ಇಂಗ್ಲಿಷ್ ಸೂರ್ಯ ಮುಳುಗಿದರೂ, ಅವರ ಕುಟಿಲತೆ, ಕಪಟ ಒಡೆದಾಳುವ ನೀತಿ, ಧರ್ಮದ ಹೆಸರಿನಲ್ಲಿ ಅನೀತಿಯನ್ನು ಸಮರ್ಥಿಸುವ ಗತ್ತುಗಳು ವಿಶ್ವದ ಎಲ್ಲೆಡೆ ಸ್ವೀಕೃತವಾಗುತ್ತಿವೆ. ಹಾಗೆಯೇ ಅವರ ಪ್ರಜಾಪ್ರಭುತ್ವದ ಕೀಳು ದರ್ಜೆಯ ಅನುಕರಣೆಗಳು ಹಲವೆಡೆ ಹುಟ್ಟಿಸತ್ತು ಹೋಗಿವೆ. ಇದರಿಂದ ಅವರ ಭಾಷೆಯೂ ಸಾಯುತ್ತಿದೆಯೋ ಏನೋ ಎಂಬ ಭ್ರಮೆ ಬರುತ್ತದೆ.

ಇಂಗ್ಲಿಷಿನ ಮರಣಾಸನ್ನ ಸ್ಥಿತಿಗೆ ಕನ್ನಡದ ಅಭ್ಯುದಯವೂ ಒಂದು ಕಾರಣ. ಕನ್ನಡಿಗರು ಬಲು ತಡವಾಗಿಯಾದರೂ ತಮ್ಮ ಭಾಷೆಯ ಶತ್ರುವಾದ ಇಂಗ್ಲಿಷನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ.

ನಿಜವಾಗಿ ನೋಡಿದರೆ ಇಂಗ್ಲಿಷ್‌ಪ್ರಿಯರು ಭಯಪಡಬೇಕಾಗಿಲ್ಲ. ವಿದೇಶೀ ಭಾಷೆಯನ್ನು ದ್ವಿತೀಯ ಭಾಷೆಯಾಗಿ ಬೋಧಿಸುವ ವಿಧಾನವನ್ನೇ ಕತ್ತರಿ ಕನ್ನಡದ (ಆದ್ಯತೆ ಪಡೆದ ಪ್ರಥಮ ಭಾಷೆ) ಬೋಧನೆಗಾಗಿ ಅಳವಡಿಸಿಕೊಳ್ಳಲಾಗಿದೆ. ಅಲ್ಲದೆ ಇಂಗ್ಲಿಷ್ ಬಾರದೆ ಕನ್ನಡವನ್ನು ಬಳಸುತ್ತಿದ್ದಾರೆ ಎನ್ನುವ ದುರವಾದವನ್ನು ಹೋಗಲಾಡಿಸಿಕೊಳ್ಳಲು ಇಂಗ್ಲಿಷನ್ನು ಸಮರ್ಥವಾಗಿ ಬಳಸಲಾಗುತ್ತದೆ. ''ಸಾರೀ ಲ್ಯಾಂಗ್ವೇಜ್‌ಸೆ ಹಚ್ಚಾ ಭಾಷೆಯನ್ನು ಬಳಸಲು ಹಲ್ಪ ಪ್ರಾಣ ಆಗೂ ಮಆಪ್ರಾಣ ಗಳ ಬಳಕೆಯನ್ನು ಸರಿಯಾಗಿ ಮಾಡಲಾಗದಿರುವ ಧ್ವನಿ ಪೆಟ್ಟಿಗೆಯ ದೋಷವನ್ನು ನಿಂದಿಸುವುದು ಹೇಗೆ ಅಸಹ್ಯವೋ, ಸಾಯುತ್ತಿರುವ ಇಂಗ್ಲಿಷ್ ಭಾಷೆಯನ್ನು ನೂತನ ರೀತಿಯಲ್ಲಿ ಬಳಸಿ ಬೆಳಸುವ ಪ್ರಯೋಗ ನಮ್ಮಲ್ಲಿ ಎಲ್ಲೆಡೆ ಆಗುತ್ತಿದೆ.

ಆದುದರಿಂದ ಕೆಳಕಂಡ ಪ್ರಯೋಗಗಳಲ್ಲಿ ಕಂಡುಬರುವ ಪ್ರಯೋಗಗಳಲ್ಲಿರುವ ಹೊಸ ಆಯಾಮ, ಮಣ್ಣಿನವಾಸನೆ, ಗಡುಸಿನ ಸೊಗಡುಗಳನ್ನು ಗಮನಿಸುವುದು ಲಾಭಕರ.

(ಪದವೀಧರ ಮುಖ್ಯೋಪಾಧ್ಯಾಯರ ಮೇಲ್ವಿಚಾರಣೆ ಪುಸಕ್ತದಿಂದ ಉದ್ಧರಿಸಿದು)

(1) She replay is not apt.

(2) The teacher alow the pupils to read individuals

(3) Kannada is doing with pupils reading

(4) English lesson with now thought scientific words of B.B.C. etc., AIR Etc., on BB,

(5) She introdused climbing, catching, driving, doing,

(ಮು.ಉ. ರವರ ಅಭಿಪ್ರಾಯ ಏನು ಎಂದು ಅವರನ್ನೇ ಕೇಳಿದಾಗ ಹೇಳಿದ್ದು)

(1) ಅವಳ (ಉಪಾಧ್ಯಾಯಿನಿಯು) ಉತ್ತರ ಸೂಕ್ತವಾಗಿರಲಿಲ್ಲ

(2) ಒಬ್ಬೊಬ್ಬ ವಿದ್ಯಾರ್ಥಿಯಿಂದಲೂ ಉಪಾಧ್ಯಾಯರು ಪಾಠ ಓದಿಸಿದರು.

(3) ವಿದ್ಯಾರ್ಥಿಗಳು ಓದುತ್ತಾ ಇದ್ದರು. (ಉ.ರು) ಕನ್ನಡ ಪಾಠ ಮಾಡುತ್ತಿದ್ದರು.

(4) ಇಂಗ್ಲಿಷ್ ಪಾಠ [ನಡೆಯುತ್ತಿತ್ತು] ಆಧುನಿಕ ವೈಜ್ಞಾನಿಕ ಪದಗಳಾದ ಬಿ.ಬಿ.ಸಿ., ಎ.ಐ.ಆರ್. ಮೊದಲಾದವು ಕಪ್ಪು ಹಲಗೆಯ ಮೇಲೆ ಇದ್ದವು.

(5) ಕ್ಲೈಂಬಿಗ್, ಕ್ಯಾಚಿಂಗ್, ಡ್ರೈವಿಂಗ್, ಡೂಯಿಂಗ್ ಎಂಬ ಪದಗಳನ್ನು ಪರಿಚಯ ಮಾಡಿಕೊಟ್ಟರು.

ಸ್ಥಳೀಯ ನಿಯಮಿತ ಮಾರುಕಟ್ಟೆಯಲ್ಲಿರುವ ಫಲಕದ ಮೇಲಿನ ಒಂದು ಬರಹವನ್ನೂ ತಮ್ಮ ಹವಗಾಅನೆಗಾಗಿ ಕಳಿಸುತ್ತಿದ್ದೇನೆ.

ನಿ.ಮಾ. ಯಾರ್ಡ್ A.N.K.

Fifth October 83ಯ Tender ಪ್ರಕಟಣೆಗಳು

A.C.H. ಅಂಗಡಿಯಲ್ಲಿ Lot No. 1-832

RSTA Lot No. 3-434=00 HRT
4-483=00 NASA
1-395=00 OSLO
2-418=00 UNCT

H.Y.B.M. Lot No. 1-399=00 NEF

Tender Notification ಮುಕ್ತಾಯ.

ಈಗ ನೀವೇ ಹೇಳಿ ಸಾಯುತ್ತಿರುವುದು ಇಂಗ್ಲೀಷೋ ಅಥವಾ ... ...? ಇಷ್ಟೇ ಸಾಕೋ ಏನು ಇನ್ನೂ ಕಳಿಸಲೋ

ನಿಮ್ಮವ ಅಫೇಕ್ಷನೆಟ್ಲಿ
ಎಸ್. ಗಣೇಶ್

(ಸಾಕು. ಅಂಗ್ಲೈ ಹುಣ್ಣಿಗೆ ಕನ್ನಡಿ(ಡ) ಏಕೆ-ಸಂ)

ಅಪಾರ್ಥ ಕೋಶ

— ಆನಂದ್

೧	ಅಪಾರ್ಥ ಕೋಶ	:	ಕಪ್ಪುಹಣದ ತ್ರಿಜೋರಿ.
೨	ಪುಷ್ಕರಿಣಿ	:	ಬಸ್ಸಿನಲ್ಲಿ ಹಿಂದಿನಿಂದ ತಳ್ಳುವವಳು.
೩	ಮಧ್ಯಸ್ಥ	:	ಬಾರ್ ಪಂಚಾರಕ.
೪	ಧೂಮಕೇತು	:	ಸಿಗರೇಟ್ ಕಚ್ಚಿ ಓಡಾಡುವವನು.
೫	ವೀಕ್ಷಕ	:	ಟಿ. ವಿ. ನೋಡಿ ಸುಸ್ತಾದವ.
೬	ಬಂಡೋದರಿ	:	ಮೇನಕಾ ಗಾಂಧಿ
೭	ಬರ್ನಾಲಯ	:	ಸ್ವರ್ಣ ದೇಗುಲ
೮	ವಿದ್ಯಾರಣ್ಯ	:	ಆಧುನಿಕ ಕಾಲೇಜು.

ಗೌರಿ-ಗಣೇಶ

(ಶಿಶು-ಗೀತೆ)

ಜಿ. ರಾಮಣ್ಣ ಸ್ವಾಕ್ ಆಲೆಟ್ಟಿ

ಅಕ್ಕ ಕಾಯ್ತಿದ್ಲು
ಭಾವ ಬರದಿರೆ ಬಾನೇ
ಬಿದ್ಹಂತಾಡ್ತಿದ್ಲು
ಭಾವ ಬಂದರ ನನ್ನೂ
ಮೂಲೇಗೆ ತಳ್ತಿದ್ಲು
ನಮ್ಮಕ್ಕ ನೋಡಲು ಗೌರಿ
ಅದಕೇ ಭಾವ ಬರ್‍ತಿದ್ದ!
ಕೊನಗೂ ಒಂದಿನ ಭಾವನಜೊತೆಗೆ
ಒಲಟೇ ಓದ್ಲು ನಮ್ಮಕ್ಕ!





ಅಕ್ಕ ಓಗಿ ಕಂಗಾಲಾಗಿ
ಒಂಟೀ ಆದೆ ನಾನು
ಅಂತೂ ಒಂದಿನ ಅಕ್ಕ ಊರಿಗೆ
ಬರೋ ಸುದ್ದಿ ಕೇಲ್ದೆ
ಗಾಡೀ ನೋಡಿ ರೋಡಿಗೆ ಜಾರಿ
ಅಕ್ಕನ್ನೊಮ್ಮೆ ನೋಡ್ತೆ,
ಗೌರೀ ಬದ್ಲು ಗಣೇಶನ್ನ ಕಂಡು
ಅಳೂನೇ ಬಂತು ನಂಗೆ
ಭಾವ ಮಾಡಿದ್ ಕೆಲ್ಸ ನೋಡಿ
ತುಂಬಾ ಕೋಪ ಬಂದ್ಬಿಡ್ತು!

ಪುಸ್ತಕ ವಿಮರ್ಶೆ

ಪುರಾವೃತ ತಮಸೋಮ ಪ್ರಕಾಶನ, ಶಿವಮೊಗ್ಗ

ಬೆಲೆ: ರೂ 10/-

ಈ ಶತಮಾನದ ಪೂರ್ವಾರ್ಧದ ಕೊನೆಯ ಹೊತ್ತಿಗೆ ಕಥಾನಾಯಕ ವೆಂಕುವು ತನ್ನ ಷಷ್ಟ್ಯಬ್ದಿಯನ್ನು ಆಚರಿಸುವ ಸಂದರ್ಭದಲ್ಲಿ ತಾನು ಬಾಳಿ ಬದುಕಿದ ಜೀವನ ವನ್ನು ಸ್ಮರಿಸಿಕೊಳ್ಳುತ್ತಿದ್ದಂತೆಯೇ ಕತೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ.

ಮೈಸೂರಿನಲ್ಲಿ ಮಹಾರಾಜರು ಆಳುತ್ತಿದ್ದ ದಿನಗಳು. ಬೆಂಗಳೂರಿನ ದಂಡಿ ನಲ್ಲಿ ಬಿಳಿಯರು ಓಡಾಡುತ್ತಿದ್ದ ಕಾಲ. ಈ Back drop ನಲ್ಲಿ ವೆಂಕುವು ತನ್ನ ಬಾಲ್ಯ ವಿದ್ಯಾಭ್ಯಾಸಗಳನ್ನು ಮುಗಿಸಿ ಗೃಹಸ್ಥಾಶ್ರಮಕ್ಕೆ ತೇರ್ಗಡೆಯಾಗುತ್ತಾನೆ.

ಎಳವೆಯ ದಿನಗಳಲ್ಲಿ ಕಿರಿಸ್ತಾನ ಗೆಳೆಯ ಅಂಭ್ರೋಸ ಹಾಗೂ ವೆಂಕುವಿನ ಅಪ್ರಬುದ್ಧ ಮನಸ್ಸುಗಳಲ್ಲಿ ಏಳುತ್ತಿದ್ದ ಧರ್ಮದ ಜಿಜ್ಞಾಸೆ, ಈ ಸುಮಾರಿಗೇ ಪ್ರಾರಂಭ ವಾಗಿ ವೆಂಕುವಿನ ಬಾಳಿನುದ್ದಕ್ಕೂ ಅವನ ಬದುಕಿನ ಒಂದು ಭಾಗವೇ ಆಗಿ ಹೋಗಿದ್ದ ಮೇರಿಯಾಳ ಆಕರ್ಷಣೆ ರಾಜಮ್ಮಳ ಜತೆಗೆ ಅವನ ಇಜ್ಜೋಡಿನ ಸಂಸಾರ ಅಥವಾ ಎಡವಟ್ಟು ತನದ ನೆಪದಿಂದ ಉದ್ಭವಿಸಿದ ವೆಂಕೂ ಹಾಗೂ ನೀಲಮ್ಮರ ಗಂಡು ಹೆಣ್ಣಿನ ಸಂಬಂಧ ಇವಿಷ್ಟು ಕತೆಯ ಹಂದರ. ಜನ ಜೀವನಕ್ಕೆ ಕಾಲದ ಯಾವದೇ Back drop ಇರಲಿ, ಜನರ ಜೀವನ ಮಟ್ಟ ಜಾಣ್ಮೆಯ ಮಟ್ಟ ಯಾವದೇ ಹಂತ ದಲ್ಲಿರಲಿ, ಕಾಲ ಯಾವದೇ ಇರಲಿ. ಜನ ಯಾವದೇ ಇರಲಿ ಗಂಡು ಹೆಣ್ಣಿನ ಆಕರ್ಷ ಣೆಯೇ ಮನುಷ್ಯ ಜೀವನದ ಬಹು ದೊಡ್ಡ ಭಾಗವನ್ನಾಕ್ರಮಿಸಿರುತ್ತದೆ. ಅಂತೆಯೇ ವೆಂಕು–ಮೇರಿಯಾ, ವೆಂಕು–ನೀಲಮ್ಮ, ಶಾಂತಾರಾಮ–ಮೀನಾ ಇವರ ಸಂಬಂಧ ಗಳು. ಆದರೆ ಶಾಂತಾರಾಮ–ಮೀನಾರ ಸಂಬಂಧ ಮಾತ್ರ ಸಿನಿಮೀಯವಾಗಿದೆ.

ಲೇಖಕ, ಕೇಫರವರ ಸಿದ್ಧಹಸ್ತದಲ್ಲಿ ಕತೆ ಮಾಗಿ, ಕತೆ ಹೇಳುವ ಕಲೆ ಓದುಗರನ್ನು ಉದ್ದಕ್ಕೂ ಓದಿಸಿಕೊಂಡು ಹೋಗುತ್ತದೆ.

ಕಾದಂಬರಿಯ ಸಮಗ್ರ ಜೀವಾಳವನ್ನು ಮುನ್ನುಡಿಯಲ್ಲಿ ಸೇವ ನಮಿರಾಜ ಮಲ್ಲರು "ಜೀವನವೇ ಒಂದು ಡಿಪ್ಲೊಮಸಿ ಎನ್ನೋದಿಕ್ಕೆ ವೆಂಕುವು, ರಾಜಮ್ಮ, ಮೇರಿಯಾ, ನೀಲಮ್ಮ ಮುಂತಾದವರೊಡನೆ ನಡೆಸಿದ ಕಪ್ಪು ಬೆಳಕಿನ ಸಂಬಂಧವೇ ಸಾಕ್ಷಿ" ಎಂಬ ಮಾತುಗಳಲ್ಲಿ ಸೆರೆಹಿಡಿದಿದ್ದಾರೆ.

"ಪುರಾವೃತ" ಓದಿ ಮೆಚ್ಚಿಕೊಳ್ಳಬಹುದಾದ ಕೃತಿ.

—ಶೀನೊ

ಭಾವೈಕ್ಯತೆ

(A Scientific Approach) —ಜಿ.ಎಸ್.ಜಿ.

"ಇಂದು ನಮಗೆ ಬೇಕಾಗಿರುವುದೇನು ?–ನಾವು ಸಾಧಿಸಬೇಕಾದದ್ದು ಏನನ್ನು ? ಏನು ಇದ್ದರೆ ನಮ್ಮ ದೇಶ ಮುಂದೆ ಬಂದೀತು ?–ದೇಶದ ಪ್ರಗತಿಗೆ ಬೇಕಾದ ಏಕೈಕ ಅಂಶ ಯಾವುದು ?–ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ವೈವಿಧ್ಯತೆಯಲ್ಲಿ ನಾವು ಹುಡುಕುತ್ತಿರುವುದು ಏನನ್ನು. Developing Countryಯಾದ ಭಾರತ ಪೂರ್ತಿಯಾಗಿ develop ಆಗಬೇಕಾದರೆ ಏನು ಬೇಕು ? ಇಂದು ರಾಷ್ಟ್ರಾದ್ಯಂತ ಎದ್ದಿರುವ ಗೊಂದಲಗಳಿಗೆ for example ಪಂಜಾಬ್ ಸಮಸ್ಯೆ–ಬೆಳಗಾಂ ಸಮಸ್ಯೆ ಬೆಳಗಾಗಿ ಎದ್ದರೆ ಸಮಸ್ಯೆ–ರಾತ್ರಿ ಮಲಗಿದರೆ ಸಮಸ್ಯೆ–ನಿಮ್ಮೂರಿನ ನೀರಿನ ಸಮಸೆ ನಮ್ಮೂರಿನ ಮನೆ ಬಾಡಿಗೆ ಹೆಚ್ಚಳದ ಸಮಸೆ–ಹುಚ್ಚಣ್ಣನ್ ಮಗಳಿಗೆ ಗಂಡು ಸಿಗದ ಸಮಸೆ–ದ್ಯಾಮವ್ವನ ಮಗಳು ಓಡಿಹೋದ ಸಮಸ್ಯೆ–ಹೀಗೆ ನಾನಾ ಸಮಸ್ಯ ಗಳಿಂದ ಜರ್ಝರಿತವಾದ ದೇಶದ ಏಳಿಗೆಯ ಸಮಸ್ಯೆಗೆ ಏನು ಪರಿಹಾರ ?"

ಸಾಹೇಬರು ಕೂಡಲಹಳ್ಳಿ ಶಿಕ್ಷಕರ ಸಭೆಯಲ್ಲಿ ಪ್ರಶ್ನೆ ಹಾಕಿ ಉತ್ತರಕ್ಕಾಗಿ ಕಾದರು. ಉತ್ತರಕ್ಕೆ ಕಾಯುವುದು ಶಿಷ್ಟಾಚಾರ. ಸಾಹೇಬರು ಕೇಳಿದ ಪ್ರಶ್ನೆಗೆ ಶಿಕ್ಷಕರು ಉತ್ತರ ತಟಕ್ಕನೆ ಹೇಳುವುದು ಶಿಷ್ಟಾಚಾರವಲ್ಲ ಉದ್ಧಟತನ. ಸಾಹೇಬರ ಪ್ರಶ್ನೆಗೆ ಸಾಹೇಬರೇ ಉತ್ತರ ಹೇಳಬೇಕು. ಅದು ಸಂಪ್ರದಾಯ. ಸಂಪ್ರದಾಯ ಶರಣ ರಾಷ್ಟ್ರದ ಶಿಷ್ಟಾಚಾರ. ಆದ್ದರಿಂದ ಸಭೆಯಲ್ಲಿ Silenceಉ–grave Silence ಉ. ಸಾಹೇಬರೇ ಎದ್ದರು.

"ನಾನು ಹೇಳಲೇ–ಇದಕೆಲ್ಲಾ ಒಂದೇ ಉತ್ತರ ಭಾವೈಕ್ಯತೆ–ಭಾವೈಕ್ಯತೆ ಯನ್ನು ಸಾಧಿಸಿದರೆ ನಾವು ಏನನ್ನು ಬೇಕಾದರೂ ಸಾಧಿಸಬಹುದು. ಹಿಮಾಲಯಾ ಹತ್ತಬಹುದು ಹಿಂದೂ ಮಹಾಸಾಗರದಲ್ಲಿ ಮುಳಗಬಹುದು ಎಲ್ಲ ಸಾಧನೆಗಳಿಗೂ ತಾರಕ ಮಂತ್ರ ಭಾವೈಕ್ಯತೆ ಈಗ ನಾವು ಶಾಲೆಗಳಲ್ಲಿ ಯಾವ ವಿಷಯನಾದ್ರೂ ಭೋದಿಸಲು ಅದರಲ್ಲಿ ತರಬೇಕಾದ್ದು ಭಾವೈಕ್ಯತೆ–ಭಾವೈಕ್ಯತೆ, ಎಂಬ conceptನ ಎಲ್ಲ ವಿಷಯಗಳಲ್ಲೂ ತರೋದು–ನಾನು ಹೇಳ್ತೀನಿ ಸಾಧ್ಯ"

ಸಾಹೇಬರು ಅಪ್ಪಣೆ ಕೊಡಿಸಿದ ಮೇಲೆ ಅಸಾಧ್ಯ ಎನ್ನುವ ಪ್ರಶ್ನೆಗೆ ಅವ ಕಾಶವೇ ಇಲ್ಲ, ಸಾಹೇಬರು ಹೇಳಿದ ಮೇಲೆ ಮುಗಿತು ಎಲ್ಲ ವಿಷಯಗಳಲ್ಲಿ ಭಾವೈ

ಕ್ಯತೆಯನ್ನು ತರಬಹುದು ಎಂದರೆ ತರಲೇಬೇಕು ಎಂದು ಅರ್ಥ–ಶಿಕ್ಷಕರಲ್ಲೇ ಭಿನ್ನಾಭಿಪ್ರಾಯ ಬಂದರೆ ಭಾವೈಕ್ಯತೆ ತರಲು ಸಾಧ್ಯವೇ. ಆದ್ದರಿಂದ ಶಿಕ್ಷಕರು ಕೋಲೆ ಬಸವರಾಗಬೇಕು–ಹೌದಪ್ಪಗಳಾಗಬೇಕು.

ಈಗ ಸಾಹೇಬರು ಶಿಕ್ಷಕರಿಗೆ ಅಪ್ಪಣೆ ಕೊಡಿಸಿದರು. ಶಿಕ್ಷಕರು ತಮ್ಮ ತಮ್ಮ ವಿಷಯಗಳಲ್ಲಿ ಭಾವೈಕ್ಯತೆಯನ್ನು ಹೇಗೆ ತರಬೇಕು ಎಂಬುದನ್ನು ತಿಳಿಸಬೇಕು. ಭಾವೈಕತೆಯ ಧೂಳು ಕೆತ್ತಿ Post Mortem ಮಾಡಲು ಮುಕ್ತ ಅವಕಾಶ ಶಿಕ್ಷಕರಿಗೆ. ಕೋಲೆ ಬಸವರಿಗೆ ಬಾಲ ಆಡಿಸಲು ಅವಕಾಶ. ಅಪರೂಪದ ಅವಕಾಶ. "ಸಾರ್ ಭಾವೈಕ್ಯತೆ ಬರಬೇಕಾದ್ರೆ ಭಯೋತ್ಪಾದನೆ ನಿರ್ಮೂಲ ಆಗಬೇಕು" ಶಿಕ್ಷಕ A ಇವರ ಅಭಿಪ್ರಾಯ. "ನಮ್ಮ ಹುಡುಗರಿಗೆ ಭಯ ಅಂದರೇನು ಅಂಬೋದೇ ಗೊತ್ತಿಲ್ಲ ಭಯ ಅಂದ್ರೇನು ಅವರ ಉತ್ಪಾದನೆ ಎಂಗೆ ಅಂಬೋದು ತಿಳ್ಕೋಬೇಕಾಗಿದೆ ಮೊದಲ ಪಾಯಿಂಟು" ಶಿಕ್ಷಕ B ಯವರ ಅಂಬೋಣ. "ಅಂದರೆ ಭಯೋತ್ಪಾದನೆ ಉಂಟು ಮಾಡದೇ ಅದರ ನಿರ್ಮೂಲನೆ ಅಸಾಧ್ಯ" ಶಿಕ್ಷಕರ C ಯುವರ ಅನಿಸಿಕೆ. "ಅಂದರೆ ಭಯೋತ್ಪಾದನೆ ನಿರ್ಮೂಲನೆ ಮಾಡದೆ ಭಾವೈಕ್ಯತೆ ಬರೋಲ್ಲ. ಭಯೋತ್ಪಾದನೆ ಇಲ್ಲದೆ ಅದರ ನಿರ್ಮೂಲನೆ ಅಸಾಧ್ಯ ಆದ್ದರಿಂದ ಶಿಕ್ಷಕನ ಆದ್ಯ ಕರ್ತವ್ಯ ಭಯೋತ್ಪಾದನೆಯನ್ನುಂಟು ಮಾಡುವುದು.

ಶಿಕ್ಷಕ B ಯದ ಅಂತಿಮ ಸಂದೇಶ "Correct Theory of cause and effect. For every effect there must be some cause—therefore create the cause–Study the effect and its after effects–to undo the after effect — nullify the effect — to nullify the effect—eradicate the cause hence therefore primarily create the cause–wonderful—B ಯುವರು ಹೇಳಿದ್ದು ಸರಿ record ಮಾಡಿ" ಸಾಹೇಬರು ಅಪ್ಪಣೆ ಕೊಟ್ಟರು.

"ಈಗ ನಮ್ಮ ಮುಂದಿರುವ ಮುಂದಿನ ಸಮಸ್ಯೆ ನಾವು ಕಲಿಸುವ ವಿಷಯಗಳಲ್ಲಿ–ಭಾವೈಕ್ಯತೆ ತರುವುದು ಭಾಷೆ–ಸಮಾಜಶಾಸ್ತ್ರಗಳಲ್ಲಿ ಭಾವೈಕ್ಯತೆ ತರೋದು ಸುಲಭ–ಆಮೂರ್ತಿ ಶಾಸ್ತ್ರ ಗಣಿತದಲ್ಲಿ ಭಾವೈಕ್ಯತೆ ಹೇಗೆ ತರ್ತೀರಿ?" ಸಾಹೇಬರ ಪ್ರಶ್ನೆ

ಶಿಕ್ಷಕರಲ್ಲಿ M ರವರು Universally accepted-ವಯೋವೃದ್ಧರು–ಜ್ಞಾನ. ವೃದ್ಧರು, ಪ್ರತಿಭಾವಂತರು M ರವರು ಎದ್ದು ಹೇಳಿದರು

"ಸಾರ್–ಈಗ–ಅದೇ ಭಾವೈಕ್ಯತೇನ Arithmetic ನಾಗೆ ತರಾಣೋ–Algebra ದಾಗೆ ತರಾಣೋ—Geometry ಒಳಗೆ ತರಾಣೋ"

"ಅಂಕಗಣಿತ" ಕೆಲವರು ಕೂಗಿದರು

"ಬೀಜಗಣಿತ" ಕೆಲವರು ಎಂದರು

"ಜಾಮಿಟ್ರಿ ಮತ್ತೆ ಕೆಲವರು ಕೂಗು

"ನಮ್ಮ M ರವರು-ಪ್ರಚಂಡರು–ಮೂರರಲ್ಲಿಯೂ ತರ್ಯಾರೆ" ಸಾಹೇಬರ ನಿರೂಪ.

M ರವರು ಗಂಟಲು ಸರಿಮಾಡಿಕೊಂಡು ಪ್ರಾರಂಭಿಸಿದರು

"ಈಗ Sets–ಗಣಗಳು ತಗೊಳ್ರಿ–ಭಾರತ–ಮಹಾಗಣ ಅದರ ಗಣಾಂಶಗಳು-ಪಂಜಾಬ್ ಅಸ್ಸಾಂ etc. ಇವು ಒಂದೊದು ಉಪಗಣಗಳು ಉಪಗಣ ಪಂಜಾಬ್ ಛೇದನ ಉಪಗಣ ಹರಿಯಾಣ equals common ಗಣಾಂಶ ಚಂದೀಗಡ—ಹೀಗೆ ಕರ್ನಾಟಕ ಛೇದನ ಮಹಾರಾಷ್ಟ್ರ equals ಬೆಳಗಾಂ-ಹೀಗೆ ಕರ್ನಾಟಕ ಛೇದನ ಕೇರಳ equals ಕಾಸರಗೋಡು. ಈ ಸಾಮಾನ್ಯ ಗಣಾಂಶಗಳನ್ನು ನಿವಾರಿಸಿದರೆ-ಭಾವೈಕ್ಯತೆ ಯಾಕೆ ಆದರಪ್ಪನ್ನೂ ತರಭೋದು"'

"ಹಿಯರ್—ಹಿಯರ್—ಶಿಕ್ಷಕರ ಚಪ್ಪಾಳೆ."

"M ರವರೇ—excellent—record" –ಸಾಹೇಬರು

"ಇನ್ನ ತಗಳ್ರಿ ಬೀಜಗಣಿತ-ಭಾವೈಕ್ಯತೆಯ ಗಾಯಿತ್ರಿ ಬೀಜಗಣಿತ-ಬೀಜಗಣಿತ ಅಂದರೇನು? Algebra is Generalised Arithmetic ವೈವಿಧ್ಯತೆಯವಾದ ಅಂಕಗಣಿತದ ಸಮಸ್ಯೆಗಳನ್ನು–ಸಂಗ್ರಹವಾಗಿ ಹೇಳುವುದೇ ಬೀಜಗಣಿತ. ಅಂಕಗಣಿತ ಎಂದರೆ–ವೈವಿಧ್ಯತೆ ವಿವಿಧಭಾವಗಳು ಅವುಗಳ ಐಕ್ಯತೆ ಯಾತ್ರಾಗೆ ಐತೆ ಎಂದರೆ ಬೀಜಗಣಿತದಾಗೆ. ಗಣಿತದ ವಿವಿಧ ಭಾವಗಳ ಐಕ್ಯತೆ ಬೀಜಗಣಿತದಾಗೆ ಹೇಗೆ ಐತೋ ಹಂಗೆ-ನಮ್ಮ-ದೇಶದ ವೈವಿಧ್ಯತೆಗಳ ಐಕ್ಯತೆ ಭಾವೈಕತೆ ಒಳಗೆ ಐತೆ ಅದ್ರಾಗೆ ಇದು ಇದ್ರಾಗೆ ಅದು–ನೀ–ಮಾಯೆಯೊಳಗೋ–ನಿನ್ನೊಳಗೆ ಮಾಯೆಯೋ ಅಂದಂಗೆ–ಇದ್ರಾಗೆ ಅಡಗೈತೆ ದೇಶದ ಉನ್ನತಿ" M–ರವರ ವಿವರಣೆ.

"Very Good-M ರವರೇ–ರೆಕಾರ್ಡ್"

ಸಾಹೇಬರು ಸಂತೋಷದಿಂದ ಲೋಚಗುಟ್ಟಿದರು. ಶಿಕ್ಷಕರು ಡೆಸ್ಕುಗಳನ್ನು ಕುಟ್ಟಿ ಭಾವೈಕ್ಯತೆಯನ್ನು ಸಾಬೀತುಪಡಿಸಿದರು.

M ರವರ Confidence ಎಂದರೆ—Confidence . ಮನುಷ್ಯನಿಗೆ ಏನಿಲ್ಲ ದಿದ್ದರೂConfidence-ಇರಬೇಕು–M ರವರಿಗೆ ಇದ್ದದ್ದು Sheer Confidence "ಇನ್ನೂ ಜಾಮಿಟ್ರಿತಗೆಳ್ರಿ-ಹೆಚ್ಚಿಗೆ ಬ್ಯಾಡೇ ಬ್ಯಾಡ. ಎರಡೇ ಸಂಕೇತ ಸಾಕು–ಸರ್ವ ಸಮದ ಸಂಕೇತ ಏನು? ಮೂರು ಅಡ್ಡಗೆರೆ—ಇದು ಶೈವರ ಧರ್ಮದ ಸಂಕೇತ– ಅನುರೂಪತೆಯ ಸಂಕೇತ ಏನು? ಮೂರು ಉದ್ದಗೆರೆ–ಇದು ಶ್ರೀ ವೈಷ್ಣವರ ಧರ್ಮದ ಸಂಕೇತ-ಹೀಗೆ ವಿವಿಧ ಧರ್ಮಗಳ ಸಂಕೇತಗಳು ಜಾಮಿಟ್ರಿವಳಗೆ ಅಡಗೈತೆ- ಜಾಮಿಟ್ರಿ ಅಂದರೆ–ರಾಷ್ಟ್ರಧರ್ಮ–in a nut shell–ರಾಷ್ಟ್ರಧರ್ಮ-ಭಾವೈಕ್ಯತೆಯ ultimate-product—therefore ಜಾಮಿಟ್ರಿ ಎಂದರೆ–ರಾಷ್ಟ್ರ–ರಾಷ್ಟ್ರ ಧರ್ಮ ಭಾವೈಕ್ಯತೆ–totally ಅಖಂಡ ಭಾರತ"

"ಹಿಯರ್–M–ಹಿಯರ್ M record it beyond doubt ಸಾಹೇಬರೆಂದರು. ಸಾಹೇಬರು ಸಂತೋಷಾತಿರೇಕದಿಂದ M ರವರನ್ನು ಅಪ್ಪಿಯೇ ಬಿಟ್ಟರು.

"ಈಗ ಶ್ರೀ S ರವರು ಸೈನ್ಸ್ನಾಗೆ ಭಾವೈಕ್ಯತೆ ತರ್ತಾರೆ" ಸಾಹೇಬರು ಅಪ್ಪಣೆ ಕೊಡಿಸಿದರು.

S ರವರು ಎದ್ದರು–ಕೆಮ್ಮಿದರು–ಕ್ಯಾಕರಿಸಿದರು ಉಗುಳು ನುಂಗಿದರು ನಂತರ "ವಿಜ್ಞಾನದಾಗೆ ಭಾವೈಕ್ಯತೆ ತರಾದು ಭಾಳಾ ಸುಲಭ—ಅದು ತರೋನ ಮ್ಯಾಲೆ ಅವಲಂಬಿಸುತ್ತದೆ. ನಾನು ನನ್ನ ಕ್ಲಾಸ್‌ಗೆ ಬೇಕಾದಷ್ಟು ಸಲ ಭಾವೈ ಕ್ಯತೇನ ತಂದಿದೀನಿ ಸೈನ್ಸ್ನಾಗೆ"

"ಅದು ಹೇಗೆ ?" K ಕೇಳಿದರು

"ಈಗ ಭೌತಶಾಸ್ತ್ರ ತಗಳ್ರಿ ವಾಯುವಿನ ಒತ್ತಡ–ವಾಯು–ಅನೇಕ ಅನಿಲಗಳ ಮಿಶ್ರಣ–ಇದು ವೈವಿಧ್ಯತೆ–ಆದರೆ ವಾಯು ಒಂದೇ ಇದು ಭಾವೈಕ್ಯತೆ—ವಾಯುಗೆ ಒತ್ತಡ ಹಾಕಿದಾಗ ಏನಾಕ್ತತೆ—ಕಣಗಳು ಹತ್ತಿರಕ್ಕೆ ಬರ್ತಾವೆ. ಅಂದರೆ ನಿಮ್ಮ ದೇಶಕ್ಕೆ ಆಪತ್ತು ಬಂದಾಗ–ಫಾರ್ ಎಕ್ಸಾಂಪಲ್–ಚೀನಾ ಧಾಳಿ–ಪಾಕೀಸ್ಥಾನ ದಾಳಿ ಆಗ ವೈವಿಧ್ಯತೆ-ಭಿನ್ನಾಭಿಪ್ರಾಯ ಮರೆತು ಇಡೀ ದೇಶ ಒಂದಾಕತೆ-ಇದು ಭಾವೈಕ್ಯತೆ –ಹೊರಗಿನ ಆಪತ್ತೇ ಒತ್ತಡ. ಒತ್ತಡಾನ ತೆಗದ್ರೆ ಏನಾಕತೆ-ಕಣಗಳು ದೂರಾಕ್ತಾವೆ.

ಅದನ್ನು ಇಲ್ಲದ್ದಾಗ ವೈವಿಧ್ಯತೆಗಳು ಎದ್ದು ಕಾಣುತ್ತವೆ ಇದರ ಅರ್ಥ ಏನು?" S ಕೇಳಿದರು.

"ಒತ್ತಡ ಇದ್ದರೆ–ಕಣ ಹತ್ರ ಬರ್ತಾವೆ–ಅದನ್ನು ಇದ್ದರೆ ಭಾವೈಕ್ಯತೆ–ಅದು ಇಲ್ಲದಿದ್ದರೆ ವೈವಿಧ್ಯತೆ"–K ಪೂರ್ತಿ ಮಾಡಿದರು. "wonderful–S–ರವರ ಪಾಯಿಂಟನ್ನೂ–K ರವರ corollary ಯನ್ನೂ record ಮಾಡಿ"–ಸಾಹೇಬರು ಹೇಳಿದರು.

"ಇನ್ನೂ ಕೆಮಿಸ್ಟ್ರಿ ಕೇಳಿ–ಅದ್ರಾಗೂ ಐತೆ–ಭಾವೈಕ್ಯತೆ ಒಂದು Mole ಅಂದರೆ 1ಗ್ರಾಂ ಅಣುತೂಕದ ಯಾವುದೇ ಅನಿಲದ ಗಾತ್ರ 22400 ಮಿಲಿ ಲೀಟರು ಆದರೆ ಬೇರೆ ಬೇರೆ ಅನಿಲಗಳ–ಅಣು ತೂಕ-ರಚನೆ ಗುಣಗಳು ಬೇರೆ ಬೇರೆ-ಆದರೂ 1Mole ಅನಿಲದ ಗಾತ್ರ ಒಂದೇ–ಹಾಗೆ ವಿವಿಧ ಭಾಷೆ–ಜಾತಿ–ರೀತಿ–ಧರ್ಮ–ನೀತಿ-ನೀತಿಗೆಟ್ಟ ಜನಗಳಿದ್ದರೂ–ಅವರು ಇರುವುದು ಒಂದೇ ರಾಷ್ಟ್ರ–ಅದು ಭಾರತದ ಅನೇಕತಾ ಮೇಏಕತಾ—ಏಕತಾ ಮೇ ಅನೇಕತಾ—ಇದು ಭಾವೈಕ್ಯತೆ—ಹೆಂಗೈತೆ ಕೆಮಿಸ್ಟ್ರಿ ಒಳಗೆ ಭಾವೈಕತೆ ? " S ಕೇಳಿದರು.

ತಲೆ ತೂಗಿದರು ಸಾಹೇಬರು-ಉಳಿದವರು ಆಗಲೇ ತಲೇ ತೂಗಿ ಭಾವೈಕತೆಯ heavy doseನ ಪ್ರಭಾವವನ್ನು ತೋರಿಸಿದ್ದರು.

S ರವರು ನಿಲ್ಲಿಸುವಂತಿರಲಿಲ್ಲ: "ಇನ್ನು ಬಯಾಲಜಿ ತಗೊಳ್ಳಿ-ಒಂದೇ Fertilised ಜೀವಕೋಶ ಮಾಡುವ ವಿವಿಧ ಜೀವಕೋಶಗಳಿಂದ–ಅಂಗಾಂಶ-ಬೇರೆ ಬೇರೆಯ ಅಂಗಾಂಶಗಳಿಂದ ಅಂಗಗಳ ರಚನೆ–ವಿವಿಧ ಅಂಗಗಳಿಂದ ದೇಹರಚನೆ ಹೇಗೋ–ಹಾಗೆ ವಿವಿಧ ಜಾತಿ ಬಣ್ಣ ಧರ್ಮ ರೀತಿ ನೀತಿ ಸೇರಿ ರಾಷ್ಟ್ರ–ರಾಷ್ಟ್ರ ಧರ್ಮ–ಭಾವೈಕ್ಯತೆ" ಸಾಹೇಬರು excellent—record all the points and publish ಎಂದು ಅಲ್ಲಿಗೆ ಬಂದಿದ್ದ ಪತ್ರಿಕಾ ವರದಿಗಾರನ ಕಡೆ ನೋಡಿದಾಗ, ಆತ ಭಾವೈಕತೆಯ ನಿಶೆಯಲ್ಲಿ ತಲ್ಲೀನನಾಗಿ–ತಲೆ ತೂಗಿ ತೂಗಿ–ಡೆಸ್ಕಿನಿಂದ ತಲೆ ಎತ್ತದವನಾಗಿದ್ದ.

ಯಾತ್ರಿಕರ ಪತ್ರ

—ಕೇಫ

ಹೊನ್ನ ಹಟ್ಟಿಯ ಕಾಕಾ ಹೋಟ್ಲಲ್ಲಿ ಚಾಯಿ ಕುಡಿದು, ಹಾಗೇ ಆ ಚಾಯಿ ರುಚೀನ ಚಪ್ಪರಿಸ್ತಾ ನಿಂತುಕೊಂಡ್ವು.

"ನಾವು ಕುಡಿದಿದ್ದು ನಿಜವಾಗಿ ಚಾಯಿ ತಾನೇನ್ರಯ್ಯ ? " ಕೇಳಿದ ಚಂದಿ.

"ನಿನ್ನ ನಾಲಿಗೇಗೆ ಹೇಗಿತ್ತು ? " ಅಂದ ರಾಜ.

"ಕುಡಿಯೋವಾಗ ಬಿಸೀಲಿ ಗೊತ್ತಾಗ್ಲಿಲ್ಲ—ಈಗ ಒಂಥರಾ ಇದೆ—ಬೇವು ಬೆಲ್ಲ ತಿಂದಾದ ಮೇಲಿದ್ದಂಗೆ,..'

ಚಂದಿಯ ಮಾತು ಸರಿ ಎನ್ನಿಸಿತು. ನನ್ನ ನಾಲಿಗೇಗೂ ಅದೇ ರುಚಿ ಹರಡ್ತಾ ಇತ್ತು.

"ಒಂಥರಾ ಬೇವು ಬೆಲ್ಲದ ರುಚಿ ಕಾಣೋ ರಾಜ—ಚಂದಿ ಹೇಳಿದ್ದು ನಿಜ" ಅಂದೆ.

"ಅಂದ್ರೆ ಈ ಕಾಕಾ ಹೋಟ್ಲಲ್ಲಿ ಪ್ರತಿದಿನ ಉಗಾದಿ ಅನ್ನು ! " ಅಂದ ರಾಜ.

"ಹೌದು, ನ್ಯಾಷನಲ್ ಇಂಟೆಗ್ರೇಷನ್ ಥ್ರೂ ಕಾಕಾ ಚಾಯ್ ! " ಅಂದ ಚಂದಿ.

"ಇದೇ ತರಹ ಯೂನಿಕ್ ಟೇಸ್ಟಿರೋದು ಬೇರಾವುದಾದೂ ಪದಾರ್ಥ ಇದೆಯೇನ್ರಯ್ಯ ? " ಅಂದೆ ಕೂತೂಹಲದಿಂದ.

"ಓ ಯಸ್—ಪೆರೀ ಚರಣದೋರ ಹಿದಿಕಪ್ಪು ತಪ್ಪೆ"—ಅಂದ ಚಂದಿ.

ಚಂದಿಯ ಈ ರಿಸರ್ಚ್‌ನ ಪರಿಷ್ಕೆ ಮಾಡೋಕೆ ಆಸ್ಪದವಾಗಲಿಲ್ಲ—ಒಂದು ಜೀಪು—ಒಂದು ಕಾರು—ಇನ್ನೊಂದು ಕಾರು ಧೂಳೆಬ್ಬಿಸಿಕೊಂಡು ಹೊನ್ನುಹಟ್ಟಿ ಊರೊಳಕ್ಕೆ ನುಗ್ಗಿದವು.

ನಮಗೆ ಚಾಯ ಕೊಟ್ಟ ಮೊಯ್ದು ಕಾಕಾನ—ಏನು ಊರೋಳಗ ?—ಅಂತ ಕೇಳಿದೆವು.

"ಇವತ್ತು ಪಂಚಾಯ್ತಿಯೋರು ಟಿ. ವಿ. ಸ್ಟಾರ್ಟ್ ಮಾಡ್ತಾರೆ" ಅಂದ.

"ಸಾರ್ವಜನಿಕ ದೂರ ದರ್ಶನದ ಉದ್ಘಾಟನ ಕಣ್ರೋ"—ಅಂತ ಕೂಗಿ ಕೊಂಡ ರಾಜ. ಅಲ್ಲೇ ಗೋಡೆಗೆ ಅಂಟಿಸಿದ್ದ ನೋಟಿಸ್ ತೋರಿಸ್ತಾ.

ಕಾಕಾ ಕೊಟ್ಟ ಚಾಯನ್ನ ಜೀರ್ಣಸ್ಕೊಳ್ಳೋಕೆ ಐದಾರು ಕಿ.ಮೀ ದೂರ ತಲ ಕಾದು ದಿಕ್ಕಿನಲ್ಲಿ ತುಳಿದೇ ಬಿಡೋಣ ಅಂದು ಕೊಂಡಿದ್ದೋರು—ಹೊನ್ನುಹಟ್ಟಿ ಊರೊಳಗೆ ನುಗ್ಗಿದೆವು.

ಮೊದಲು ಹೋಗಿದ್ದು ಪೋಲಿಸ್ ಜೀಪು. ಎಸ್ ಪಿ. ಮತ್ತು ಸಿಬ್ಬಂದಿ ಇದ್ರು. ಮೊದಲ್ನೇ ಕಾರಲ್ಲಿ—ಅದೊಂದು ಟ್ಯಾಕ್ಸಿ, ಪಂಚಾಯ್ತಿ, ಅಧ್ಯಕ್ಷರು, ಟಿ.ವಿ. ಮಕ್ಯಾನಿಕನ್ನು ವಿಡಿಯೋ ಸಮೇತ ಕರ್ಕೊಂಡು ಬಂದಿದ್ರು. ಎರಡನೇ ಕಾರಲ್ಲಿ—ಅದು ಊರು ಪಟೇಲ್ರುದಂತೆ—ಪಟೇಲ್ರು, ಇಬ್ಬರು ಪುಡಾರಿಗಳು, ಎಂ. ಪಿ. ಎಂ. ಎಲ್ ಎ. ಬಂದಿದ್ದರು. ಇವಿಷ್ಟು ಸಮಾಚಾರ ನಾವು ಶೇಖರಿಸೋ ಹೊತ್ತಿಗೆ. ಚಂದಿ ನಮ್ಮ ಮಧ್ಯದಿಂದ ಮಾಯವಾಗಿದ್ದ.

ನಾವು ಹೊನ್ನ ಹಟ್ಟಿ ಪಂಚಾಯ್ತಿ ಭವನದ ಕಡೆ ಹೊರಟೆವು. ಅಲ್ಲಿಗ ಸೇರೋ ಹೊತ್ತಿಗ ಜಾತ್ರೆಗೆ ಸೇರೋ ಹಾಗೆ ಜನ ನೇರಿತ್ತು.

"ಬನ್ರಯ್ಯ—ನಿಮಗೂ ಸುಸ್ವಾಗತ" ಅಂತ—ತಾನೇ ಹೊನ್ನುಹಟ್ಟಿ ಪಟೇಲನೇನೋ ಅನ್ನೋಹಾಗೆ—ಚಂದಿ ನಮ್ಮನ್ನು ಸ್ವಾಗತಿಸಿದ.

ಪಂಚಾಯ್ತಿ ಭವನದ ಪಕ್ಕದಲ್ಲಿ ಚಪ್ಪರ ಹಾಕಿದ್ದರು. ಅಲ್ಲಿ ಉದ್ಘಾಟನೆ. ಚಪ್ಪರದ ಒಂದು ಭಾಗದಲ್ಲಿ–ತುಸು ಮರೆಯಲ್ಲಿ ವಿ.ಐ.ಪಿ. ಗಳಿಗೆ ಮಾತ್ರ ಉಪಹಾರ ನಾವು ಮೂವರೂ ಬೆಂಗಳೂರಿಂದ ಸ್ಪೆಷಲ್ಲಾಗಿ ಬಂದಿದ್ದ ಪತ್ರಕರ್ತರು ಅಂತ ಪರಿಚಯಿಸಿ ಕೊಂಡಿದ್ದರಿಂದ ನಾವೂ ಅಲ್ಲಿ ವಿ. ಐ. ಪಿ. ಗಳಾಗಿದ್ದೆವು. ಪಂಚಾಯ್ತಿ ಅಧ್ಯಕ್ಷರೇ ತಮ್ಮ ಜೊತೆಯಲ್ಲಿ ಪಟ್ಟಣದಿಂದ — ಹಳದೀ ಶಿಲೆಯಿಂದ ತಯಾರಿಸಿದ್ದ ಮೈಸೂರು ಪಾಕು–ಒಂದು ಥರಾ ಖಾರಾ ಭಾತು (ಅದಕ್ಕೆ ಒಂದೊಂದು ಹೋಟ್ಲಲ್ಲಿ ಒಂದೊಂದು ಹೆಸರಿರುತ್ತೆಯಾದರೂ ಸಾಮಾನ್ಯವಾಗಿ ಅವುಗಳಲ್ಲಿ ರವೆ! ಕಲ್ಲು, ಉಪ್ಪು

ಕರಿಬೇವಿನ ಕಡ್ಡಿ, ಮೆಣಸಿನಕಾಯಿ ಕಡ್ಡಿ. ಈರುಳ್ಳಿ ನಾರುಗಳನ್ನ ಗುರುತಿಸಬಹುದು) ಇವುಗಳನ್ನು ತಂದಿದ್ದರು. ಲೋಕಲ್ ಕುಂಜು ಕುಟ್ಟಿ ಕಾಫಿ ಬಾರಿಂದ ಕಾಫಿ ಸಪ್ಲೈ ಆಗಿತ್ತು. ಕುಂಜು ಕುಟ್ಟಿ ಕಾಫಿ ಕಾಕಾ ಚಾಯನ್ನ ಟೇಸ್ಟ್‌ನಲ್ಲಿ ಸೋಲಿಸೋ ಹಾಗಿತ್ತು ಏಕೆಂದರೆ ಅದನ್ನ ಕುಡಿದ ಮೇಲ ತಿಂದ ಬೀಡ ಕೂಡ—ಹಾಗಲ ಕಾಯಿ ಆಗಿದ ಥರಾ ಇತ್ತು.

ಎಂ.ಎಲ್.ಎ. ಮತ್ತು ಎಂ.ಪಿ. ಇಬ್ರಿಗೂ ಒಂದೊಂದು ಕೆಲ್ಸ ಕೊಡ್ಲೇಬೇಕಲ್ಲ. ಹೊನ್ನು ಹಟ್ಟಿ ಜನ—ತುಂಬಾ ಜಾಣರು. ಹದಿನೈದು ವರ್ಷಕ್ಕೆ ಹಿಂದೆ ಕಟ್ಟಿದ್ದ ಪಂಚಾಯ್ತಿ ಭವನ—ಆಗಲೇ ಬಿಳೋ ಸ್ಥಿತೀಲಿದ್ದು ಹಿಂಭಾಗ ಬಿದ್ದೂ ಹೋಗಿತ್ತು. ಅದನ್ನೇ ಪುನಃ ಎಂ. ಪಿ. ಅಮೃತ ಹಸ್ತದಿಂದ ಉದ್ಘಾಟಿಸಿದರು. ಎಂ.ಪಿ. ಅವರು ಹೊರಗಿನವರಾದ್ದರಿಂದ ಹೊನ್ನು ಹಟ್ಟಿಗೆ ಬಂದಿದ್ದು ಇದೇ ಮೊದಲ ಬಾರಿಯಂತೆ. ಪಂಚಾಯ್ತಿ ಅಧ್ಯಕ್ಷರು, ತಮ್ಮ ಸ್ವಾಗತ ಭಾಷಣದಲ್ಲಿ – ಪಂಚಾಯ್ತಿ ಮನಿ ವೊಸ್ದಾಗಿ ಸುರು ಮಾಡಿದ್ದು, ಇನ್ನೂ ಪೂರ್ತಿಯಾಗ್ಲಿಲ್ಲ ಆದ್ರೂ ಎಂ. ಪಿ. ಸಾಯೇಬ್ರು ಆಗಮ್ಸಿರೋದ್ರಿಂದ ಅವ್ರು ಅಮೃತಸ್ತದಿಂದ ಗ್ರುಪ್ರವೇಸ ಮಾಡಾಸ್ಬೇಕೊಂತ ಈ ಊರ್ಜನ ಆಸೆ ಪಡ್ತಾರೇ – ಅಂತಾ ಬೇಡಿಕೊಂಡಾಗ ಲೋಕಲ್ ಎಂ. ಎಲ್. ಎ. ಅರ್ಧ ಪೂರ್ಣವಾಗಿ ಕರತಾಡನ ಮಾಡಿದ್ದರು.

ಆಮೇಲೆ ಎಂ. ಎಲ್ ಎ. ಅವರು ಸಾರ್ವಜನಿಕ ಟಿ.ವಿ. ಉದ್ಘಾಟಿಸಿದರು. ನಮ್ಮ ಅದೃಷ್ಟಕ್ಕೆ ಆ ಸಮಯದಲ್ಲಿ ದೂರ ದರ್ಶನದ ದೈನಂದಿನ ಕಾರ್ಯಕ್ರಮ ಇನ್ನೂ ಶುರು ಆಗಿರಲಿಲ್ಲ. ಆದ್ದರಿಂದ ವಿಡಿಯೋ ಮೂಲ್ಕ ಪ್ರಾರಂಭವಾಗ ಬೇಕಾಯ್ತು. ಎಂ.ಎಲ್.ಎ. ಸ್ವಿಚ್ ಒತ್ತಿದರು. ಟಿ. ವಿ. ಸ್ಕ್ರೀನಿನ ಮೇಲೆ ಬೆಳಕು ಕಂಡ ತಕ್ಷಣ ಹೊನ್ನಹಟ್ಟಿ ಜನ ಹುಚ್ಚರಂತೆ ಕುಣಿದಾಡಿದರು. ಆಮೇಲೆ ನಕ್ಷತ್ರಗಳು, ರೈಲು ಕಂಬಿಗಳು, ಮಿಂಚು ಗುಡುಗು ಗಳೊಡನೆ ಕಾಣಿಸಿಕೊಂಡವು. ಅವೇ ಟೀವೀಂತ ಜನ ಕರತಾಡನ ಮಾಡಿದರು. ಐದು ನಿಮಿಷ – ಟೀ.ವಿ. ಸೆಟ್ ಚೇತರಿಸಿಕೊಂಡ ಮೇಲೆ ನಾಲ್ಕು ವರ್ಷಗಳಿಂದ ನಮ್ಮ ಕೀವಿಲಿ ಗುಯ್ಗುಟ್ಟುತ್ತಿರುವ

ಸ್ವಾಗತಂ ಸುಸ್ವಾಗತಂ ಸ್ವಾಗತಂ ಸ್ವಾಗತಂ ಸುಸ್ವಾಗತಂ

ಗೀತೆಯೊಡನೆ ಒಂಭತ್ತನೇ ಏಪಿಸೋಡ್ ಪ್ರಸಾರ ಶುರುವಾಯ್ತು. ಮೂರು 100 ಮೀಟರು – 200 ಮೀಟರು – 400 ಮೀಟರು ಲೇಡೀಸ್ ರನ್ನಿಂಗ್ ರೇಸಿನೊಂದಿಗೆ ಎಂ. ಎಲ್. ಎ., ಎಂ. ಪಿ. ಗಳಿಗೆ ಸುಸ್ವಾಗ – ವಿಡಿಯೋ ಆಫ್ ಮಾಡಿದರು· ಉದ್ಘಾಟನಾ ಭಾಷಣ – ಮಾನ್ಯ ಎಂ.ಎಲ್.ಎ. ಗಳಿಂದ—

"ಮಹನೀಯರೇ, ಮಹಿಳೆಯರೇ, ಅಣ್ಣ ತಮ್ಮಂದಿರೇ, ಅಕ್ಕ ತಂಗಿಯರೇ- ತಂದೆ ತಾಯಂದಿರೇ—

ಅಜ್ಜ ಅಜ್ಜಿಯರೇ—ಲೇಡಿಸ್ ಎಂಡ್ ಜೆಂಟಲ್‌ಮನ್—ನೀವೆಲ್ಲಾ ಈಗ ಈ ಟೀವೀಲಿ ನೋಡಿದಿರಲ್ಲಾ ಅಥವಾ ನಿಮಗೂ ಓಡಬೇಕೊಂತ ಆಸೆ ಇಲ್ಲವೆ?—"

"ಐತೇ–ಐತೇ !"

"ಅದಕ್ಕೆ ಸರ್ಕಾರದೋರು ನಿಮಗೆಲ್ಲಾರಿಗೆ ಇಪ್ಪತ್ತಂಶ ಒಳಗೊಂಡ ಒಂದು. ಕಾರ್ಯಕ್ರಮ ಹಾಕ್ಕೊಂಡಿದ್ದಾರೆ. ಈ ರೀತಿ ನೀವೂ ಓಡಿ ಟೀವೀಲಿ ಕಾಣಿಸ್ಕೋತಿರಿ. ಈಗ ಓಡಿದರಲ್ಲಾ–ಅದು ಏಕೆ ಅಂತ ನಿಮಗೆ ಗೊತ್ತಾ? " "ಗೊತ್ತಿಲ್ರಿ–"

"ಆಫ್ರಿಕಾ ಅಂತ ಒಂದು ದೇಶ ಇದೆ. ಅಲ್ಲಿ ಜನರಿಗೆ ಅನ್ನಿಲ್ಲ ಬಟ್ಟೆಲ್ಲ, ಮಕ್ಕಳಿಗೆ ಹಾಲು ಇಲ್ಲ, ಕ್ಷಾಮಾಂದ್ರೆ ಕ್ಷಾಮ. ಅದಕ್ಕೆ ನಮ್ಮ ದೇಶದ ಜನ ಓಡಿ ಆಫ್ರಿಕಾದೋರಿಗೆ ಸಹಾಯ ಮಾಡೋದು–ನೀವೂ ಇಂಗೇ ಓಡ್ಬೇಕು–"

"ನಮ್ಮ ದೇಶದಲ್ಲಿರೋ ಕ್ಷಾಮಕ್ಕೆ ಆಫ್ರಿಕಾ ಜನ ಇಂಗೇ ವೋಡ್ತಾರಾ ?" ಒಂದು ಕೂಗು.

"ವೋ ವೋಡೇ ವೋಡ್ತಾರೆ. ಈ ವರ್ಷ ನಾವು ಓಡ್ತೀವಿ ಮುಂದಿನೊರ್ಷ ಅವರೋಡ್ತಾರೆ–ಇಂಗೇ ನಡಿಯೋದು ಪ್ರಪಂಚ–"

"ಸ್ಪ್ಲೆಂಡಿಡ್ !" ಅನ್ನುತ್ತಾ ಚಂದಿ ಎದ್ದ,

ರಾಜನೂ ಎದ್ದ, ನಾನೂ ಎದ್ದೆ.

ನಾವು ಪೊನ್ನಹಟ್ಟಿ ಬಿಟ್ಟಾಗ ಕರತಾಡನವಿನ್ನೂ ಕೇಳಿಸುತ್ತಿತ್ತು.

ಶುಭಾಶಯಗಳೊಂದಿಗೆ ;—

ಸ್ಕೈಲಾರ್ಕ್ ಆ್ಯನ್ಸಲರೀಸ್ ಕಾರ್ಪೋರೇಷನ್

ಎ–118, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್,

ಬೆಂಗಳೂರು–560 058.